**ಕರ್ನಾಟಕ ಸರ್ಕಾರ**

**ಕರ್ನಾಟಕ ಅಧಿನಿಯಮ, 1979ರ ಸಂಖ್ಯೆ 27**

# ಕರ್ನಾಟಕ ಸ್ಥಳೀಯ ಪ್ರದೇಶಗಳೊಳಗೆ ಅಲ್ಲಿಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲಣ ತೆರಿಗೆ ಅಧಿನಿಯಮ, 1979

(1981ರ ಕರ್ನಾಟಕ ಅಧಿನಿಯಮ ಸಂಖ್ಯೆ 12, 1984ರ ಕರ್ನಾಟಕ ಅಧಿನಿಯಮ ಸಂಖ್ಯೆ 38 ಮತ್ತು 1984ರ
ಕರ್ನಾಟಕ ಅಧ್ಯಾದೇಶ ಸಂಖ್ಯೆ 15ರ ಮೂಲಕ ತಿದ್ದುಪಡಿಯಾದಂತೆ)

# ಕರ್ನಾಟಕ ಸ್ಥಳೀಯ ಪ್ರದೇಶಗಳೊಳಗೆ ಅಲ್ಲಿಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲಣ ತೆರಿಗೆ ಅಧಿನಿಯಮ, 1979

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ**

**ಅಧಿಸೂಚನೆ**

**ಕ್ರಮಾಂಕ ಲಾ 27 ಎಲ್‌ಎಂಪಿ 89 ಬೆಂಗಳೂರು, ದಿನಾಂಕ 26ನೇ ಜೂನ್ 1989**

ಕರ್ನಾಟಕ ರಾಜಭಾಷಾ ಅಧಿನಿಯಮ, 1963 (1963ರ ಕರ್ನಾಟಕ ಅಧಿನಿಯಮ, 26)ರ 5ಎ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲನಾದ ಶ್ರೀ ಪಿ. ವೆಂಕಟಸುಬ್ಬಯ್ಯ ಎಂಬ ನಾನು ಕರ್ನಾಟಕ ಸ್ಥಳೀಯ ಪ್ರದೇಶಗಳೊಳಗೆ ಅಲ್ಲಿಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲಣ ತೆರಿಗೆ ಅಧಿನಿಯಮ 1979ರ (ಕರ್ನಾಟಕ ಅಧಿನಿಯಮ, 1979ರ ಸಂಖ್ಯೆ 27) ಕನ್ನಡ ಭಾಷೆಯಲ್ಲಿರುವ ಈ ಮುಂದಿನ ಭಾಷಾಂತರವು ಸರ್ಕಾರಿ ರಾಜ್ಯಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಪಾಠವಾಗಿರತಕ್ಕದ್ದೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತೇನೆ.

**ಪಿ. ವೆಂಕಟಸುಬ್ಬಯ್ಯ**
ಕರ್ನಾಟಕ ರಾಜ್ಯಪಾಲರು

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಅರ್ಜುನಪ್ಪ**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ
(ಪ್ರಕಟಣೆಗಳು).

# ವಿಷಯಾನುಕ್ರಮಣಿಕೆ

## ಅಧ್ಯಾಯ – I

### ಪ್ರಾರಂಭಿಕ


| | | |
|---|---|---|
| 1 | ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ | 1 |
| 2 | ಪರಿಭಾಷೆಗಳು | 1 |


## ಅಧ್ಯಾಯ – II

### ತೆರಿಗೆ ವಿಧಿಸುವುದು


| | | |
|---|---|---|
| 3 | ತೆರಿಗೆ ವಿಧಿಸುವುದು | 2 |
| 4 | ವ್ಯಾಪಾರಿಗಳ ನೋಂದಣಿ | 3 |


## ಅಧ್ಯಾಯ – III

### ತೆರಿಗೆಗಳ ವಿವರಣೆ ಪಟ್ಟಿಕೆ, ಕರನಿರ್ಧರಣೆ, ಸಂದಾಯ, ವಸೂಲಿ ಮತ್ತು ಸಂಗ್ರಹಣೆ


| | | |
|---|---|---|
| 5 | ವಿವರ ಪಟ್ಟಿಕೆಗಳು ಮತ್ತು ಕರ ನಿರ್ಧರಣೆ | 4 |
| 6 | ಕರ ನಿರ್ಧರಣೆಯಿಂದ ತಪ್ಪಿಸಿಕೊಳ್ಳುವ ಸರಕುಗಳ ಪ್ರವೇಶಕ್ಕಾಗಿ ತೆರಿಗೆ ಸಂದಾಯ | 4 |
| 7 | ಮುಂಗಡವಾಗಿ ತೆರಿಗೆಯ ಸಂದಾಯ | 5 |
| 8 | ತೆರಿಗೆ ಸಂದಾಯ ಮತ್ತು ವಸೂಲಿ | 5 |
| 9 | ಕೆಲವು ಇತರ ವ್ಯಕ್ತಿಗಳಿಂದ ತೆರಿಗೆಯ ವಸೂಲಿ | 7 |
| 10 | ಫರ್ಮುಗಳ ಹೊಣೆ | 8 |
| 11 | ವ್ಯವಹಾರದ ವರ್ಗಾವಣೆಯಾದ ಮೇಲೆ ಸಂದಾಯವಾಗಬೇಕಾದ ತೆರಿಗೆ ಇತ್ಯಾದಿ | 8 |


## ಅಧ್ಯಾಯ – IV

### ತೆರಿಗೆ ಪ್ರಾಧಿಕಾರಗಳು


| | | |
|---|---|---|
| 12 | ತೆರಿಗೆ ಪ್ರಾಧಿಕಾರಗಳು | 9 |

## ಅಧ್ಯಾಯ – V

## ಅಪೀಲು ಮತ್ತು ಪುನರೀಕ್ಷಣೆ


| | | |
|---|---|---|
| 13 | ಅಪೀಲುಗಳು | 9 |
| 14 | ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು | 11 |
| 15 | ರಾಜಸ್ವಕ್ಕೆ ಬಾಧಕವಾದ ಆದೇಶಗಳನ್ನು ಕಮೀಷನರು ಪುನರೀಕ್ಷಣೆ ಮಾಡುವುದು | 11 |
| 16 | ಉಚ್ಚ ನ್ಯಾಯಾಲಯಕ್ಕೆ ಅಪೀಲು | 11 |
| 17 | ತಪ್ಪುಗಳನ್ನು ಸರಿಪಡಿಸುವಿಕೆ | 12 |


## ಅಧ್ಯಾಯ – VI

## ಸಂಕೀರ್ಣ


| | | |
|---|---|---|
| 18 | ಲೆಕ್ಕಪತ್ರಗಳನ್ನು ಹಾಜರುಪಡಿಸಲು ಆದೇಶ ಮಾಡಲು ಅಧಿಕಾರ ಮತ್ತು ಪ್ರವೇಶ ಪರೀಕ್ಷೆ ಮತ್ತು ಅಭಿಗ್ರಹಣದ ಅಧಿಕಾರ | 12 |
| 19 | ರವಾನಿಸುವ ಏಜೆನ್ಸಿ, ಇತ್ಯಾದಿ ವಿವರ ಪಟ್ಟಿಕೆಗಳನ್ನು ಒಪ್ಪಿಸುವುದು | 13 |
| 20 | ವಾಹನ ಮತ್ತು ದೋಣಿಗಳ ಒಡೆಯರು ಮುಂತಾದವರಿಂದ ಕೆಲವು ದಾಖಲೆಗಳ ಒಪ್ಪಿಸುವಿಕೆ | 14 |
| 21 | ಅಪರಾಧಗಳು ಮತ್ತು ದಂಡನೆಗಳು | 14 |
| 22 | ಅಪರಾಧಗಳ ಸಂಜ್ಞೇಯತೆ | 15 |
| 23 | ಅಪರಾಧಗಳ ರಾಜಿ | 15 |
| 24 | ಕಂಪನಿಗಳಿಂದ ಅಪರಾಧಗಳು | 15 |
| 25 | ಕರ ನಿರ್ಧರಣೆ, ಮುಂತಾದವುಗಳನ್ನು ಪ್ರಾಸಿಕ್ಯೂಷನ್‌ನಲ್ಲಿ ಪ್ರಶ್ನಿಸತಕ್ಕದ್ದಲ್ಲ | 16 |
| 26 | ಕೆಲವು ವ್ಯವಹರಣೆಗಳ ಪ್ರತಿಷೇಧ | 16 |
| 27 | ಈ ಅಧಿನಿಯಮದಲ್ಲಿ ಉಪಬಂಧಿಸಿದಂತೆ ಹೊರತು ನ್ಯಾಯಾಲಯಗಳು ಕರನಿರ್ಧರಣೆಯನ್ನು ತಳ್ಳಿಹಾಕತಕ್ಕದ್ದಲ್ಲ ಅಥವಾ ಮಾರ್ಪಾಟು ಮಾಡತಕ್ಕದ್ದಲ್ಲ | 16 |
| 28 | ವಿನಾಯಿತಿಗಳು | 16 |
| 29 | ತೆರಿಗೆಯ ಉತ್ಪನ್ನಗಳ ವಹಿಸಿಕೊಡುವಿಕೆ | 17 |

| | | |
|---|---|---|
| 30 | ನಿಯಮ ರಚನಾಧಿಕಾರಿ | 17 |
| 31 | ತೊಂದರೆಗಳನ್ನು ನಿವಾರಿಸಲು ಅಧಿಕಾರ | 18 |
| | ಅನುಸೂಚಿ | 19 |

## 1979ರ ಕರ್ನಾಟಕ ಅಧಿನಿಯಮ, ಸಂಖ್ಯೆ 27

(1997ರ ಜೂನ್ ಮೊದಲ ದಿವಸದಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಮೊದಲ ಬಾರಿಗೆ ಪ್ರಕಟವಾಯಿತು)

## ಕರ್ನಾಟಕ ಸ್ಥಳೀಯ ಪ್ರದೇಶಗಳೊಳಗೆ ಅಲ್ಲಿಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲಿನ ತೆರಿಗೆ ಅಧಿನಿಯಮ, 1979

(1979ರ ಮೊದಲನೇ ದಿನದಂದು ರಾಷ್ಟ್ರಪತಿಯವರಿಂದ ಅನುಮತಿ ಪಡೆಯಿತು)

ಸರಕುಗಳ ಸ್ಥಳೀಯ ಪ್ರದೇಶಗಳೊಳಗೆ ಅಲ್ಲಿಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆಯನ್ನು ವಿಧಿಸುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ಸ್ಥಳೀಯ ಪ್ರದೇಶಗಳೊಳಗೆ ಅವುಗಳಲ್ಲಿ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ರಾಜ್ಯ ಸರ್ಕಾರವು ತೆರಿಗೆ ವಿಧಿಸುವುದನ್ನು ಉಪಬಂಧಿಸುವುದು ವಿಹಿತವಾಗಿರುವುದರಿಂದ ;

ಭಾರತ ಗಣರಾಜ್ಯದ ಮೂವತ್ತನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.

### ಅಧ್ಯಾಯ – I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಸ್ಥಳೀಯ ಪ್ರದೇಶಗಳೊಳಗೆ ಅವುಗಳಲ್ಲಿ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲಣ ತೆರಿಗೆ ಅಧಿನಿಯಮ, 1979 ಎಂದು ಕರೆಯತಕ್ಕದ್ದು.

2. ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

3. ಇದು 1980ನೇ ಇಸವಿ ಅಕ್ಟೋಬರ್ ಮೊದಲನೆ ದಿನದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(1) "ಅಪೀಲು ನ್ಯಾಯಾಧಿಕರಣ" ಎಂದರೆ 1976ರ ಕರ್ನಾಟಕ ಅಪೀಲು ನ್ಯಾಯಾಧೀಕರಣ ಅಧಿನಿಯಮ (1976ರ ಕರ್ನಾಟಕ ಅಧಿನಿಯಮ 10)ದ ಮೇರೆಗೆ ರಚಿತವಾದ ಕನಾಟಕ ಅಪೀಲು ನ್ಯಾಯಾಧೀಕರಣ ;

(2) "ಕರ ನಿರ್ಧರಣಾ ಪ್ರಾಧಿಕಾರ" ಎಂದರೆ ಈ ಅಧಿನಿಯಮದ ಮೇರೆಗೆ ಕರ ನಿರ್ಧರಣೆ ಮಾಡಲು ರಾಜ್ಯ ಸರ್ಕಾರದಿಂದ ಅಧಿಕೃತನಾದ ಯಾವನೇ ಅಧಿಕಾರಿ;

(3) "ಕಮೀಷನರ್" ಎಂದರೆ ರಾಜ್ಯದಲ್ಲಿ ವಾಣಿಜ್ಯ ತೆರಿಗೆ ಕಮೀಷನರೆಂದು ನೇಮಕಗೊಂಡ ವ್ಯಕ್ತಿ ;

(4) "ವ್ಯಾಪಾರಿ" ಎಂಬುದು 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ (1957ರ ಕರ್ನಾಟಕ ಅಧಿನಿಯಮ 25) 2ನೇ ಪ್ರಕರಣದ (ಟ) ಖಂಡದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನು ಹೊಂದಿರತಕ್ಕದ್ದು ಮತ್ತು ಕಾಮಗಾರಿ ಕರಾರಿನ ಮೇರೆಗೆ ಕಾಮಗಾರಿಯನ್ನು ಕೈಗೊಳ್ಳುವ ಯಾವನೇ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(5) "ಸ್ಥಳೀಯ ಪ್ರದೇಶ" ಎಂದರೆ 1976ರ ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್‌ಗಳ ಅಧಿನಿಯಮದ (1977ರ ಕರ್ನಾಟಕ ಅಧಿನಿಯಮ 14) ಮೇರೆಗೆ ನಗರ ಮಿತಿಗಳೊಳಗಿರುವ ಪ್ರದೇಶ, 1964ರ ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮದ (1964ರ ಕರ್ನಾಟಕ ಅಧಿನಿಯಮ 22) ಮೇರೆಗಿನ ಮುನಿಸಿಪಾಲಿಟಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಚಿತವಾದ ಅಥವಾ ಮುಂದುವರಿಸಿದ ಅಧಿಸೂಚಿತ ಪ್ರದೇಶ ಸಮಿತಿ, ಪಟ್ಟಣ ಮಂಡಳಿ ; ಸ್ಯಾನಿಟರಿ ಮಂಡಳಿ, ದಂಡು ಪ್ರದೇಶ ಮಂಡಳಿ ಮತ್ತು ಅಂಥ ಸ್ಥಳೀಯ ಪ್ರದೇಶಗಳ ಪರಿಮಿತಿಗಳಿಂದ 5 ಕಿಲೋಮೀಟರ್ ದೂರದೊಳಗೆ ಅಡಕವಾಗಿರುವ ಪ್ರದೇಶ.

(6) "ನೋಂದಾಯಿತ ವ್ಯಾಪಾರಿ" ಎಂದರೆ ಈ ಅಧಿನಿಯಮದ ಮೇರೆಗೆ ನೋಂದಾಯಿತನಾದ ವ್ಯಾಪಾರಿ;

(7) "ಅನುಸೂಚಿತ ಸರಕುಗಳು" ಎಂದರೆ ಈ ಅಧಿನಿಯಮದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಸರಕುಗಳು;

(8) "ತೆರಿಗೆ" ಎಂದರೆ ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದ ತೆರಿಗೆ;

(8ಕ) "ಕಾಮಗಾರಿ ಕರಾರು" ಎಂದರೆ ನಗದಿಗಾಗಿ ಅಥವಾ ಮುಂದೂಡಿದ ಸಂದಾಯ ಅಥವಾ ಇತರ ಬೆಲೆಯುಳ್ಳ ಪ್ರತಿಫಲಕ್ಕಾಗಿ ಯಾವುದೇ ಕಟ್ಟಡ ರಸ್ತೆ, ಸೇತುವೆ ಅಥವಾ ಇತರ ಸ್ಥಿರಸ್ವತ್ತಿನ ನಿರ್ಮಾಣ ಸಜ್ಜುಗೊಳಿಸುವಿಕೆ, ಮೇಲ್ಪಾಟು ಅಥವಾ ದುರಸ್ತಿ ಅಥವಾ ಯಾವುದೇ ಚರಸ್ವತ್ತಿನ ಸಜ್ಜುಗೊಳಿಸುವಿಕೆ ಮೇಲ್ಪಾಟು ಅಥವಾ ದುರಸ್ತಿಯನ್ನು ಕಾರ್ಯಗೊಳಿಸುವುದಕ್ಕಾಗಿನ ಯಾವುದೇ ಒಪ್ಪಂದ;

(9) "ವರ್ಷ" ಎಂಬುದು 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ (1957ರ ಕರ್ನಾಟಕ ಅಧಿನಿಯಮ 25) 2ನೇ ಪ್ರಕರಣದ (ಭ) ಖಂಡದಲ್ಲಿ ಅದಕ್ಕೆ ಕೊಡಲಾದ ಅರ್ಥವನ್ನು ಹೊಂದಿರತಕ್ಕದ್ದು.

## ಅಧ್ಯಾಯ – II

## ತೆರಿಗೆ ವಿಧಿಸುವುದು

**3. ತೆರಿಗೆ ವಿಧಿಸುವುದು.–** ಸ್ಥಳೀಯ ಪ್ರದೇಶದೊಳಗೆ ಅದರಲ್ಲಿ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಅನುಸೂಚಿತ ಸರಕುಗಳ ಮೇಲೆ ತೆರಿಗೆಯನ್ನು ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಮೌಲ್ಯಾನುಸಾರ ಶೇಕಡಾ ಎರಡಕ್ಕೆ ಮೀರದಿರುವಂಥ ದರದಲ್ಲಿ ಮತ್ತು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಉತ್ತರಾನ್ವಯವಾಗಿರುವಲ್ಲಿ ಅಥವಾ ಪೂರ್ವಾನ್ವಯವಾಗಿಯಾಗಲೀ ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕ ಹಾಗೂ ಬೇರೆ ಬೇರೆ ಸ್ಥಳೀಯ ಪ್ರದೇಶಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಮತ್ತು ಬೇರೆ ಬೇರೆ ದರಗಳನ್ನು ನಿರ್ದಿಷ್ಟಪಡಿಸಬಹುದು.

(3ಕ) **ನೋಂದಾಯಿತ ವ್ಯಾಪಾರಿಯಿಂದ ತೆರಿಗೆಯ ಸಂಗ್ರಹಣೆ.–**

(1) ನೋಂದಾಯಿತ ವ್ಯಾಪಾರಿಯಲ್ಲದ ವ್ಯಕ್ತಿಯು ತೆರಿಗೆಯ ರೂಪದಲ್ಲಿ ಅಥವಾ ಈ ಅಧಿನಿಯಮದ ಮೇಲೆ ತೆರಿಗೆಯ ರೂಪದಲ್ಲಿ ಎಂದು ತಾತ್ಪರ್ಯವಾಗುವ ಯಾವುದೇ ಮೊಬಲಗನ್ನು ಸಂಗ್ರಹಿಸತಕ್ಕದ್ದಲ್ಲ ಅಥವಾ ನೋಂದಾಯಿತ ವ್ಯಾಪಾರಿಯ ರೂಪದಲ್ಲಿ ಅಥವಾ ಈ ಅಧಿನಿಯಮದ ಮೇರೆಗೆ ತೆರಿಗೆ ರೂಪದಲ್ಲೆಂದು ತಾತ್ಪರ್ಯವಾಗಿ ಯಾವುದೇ ಮೊಬಲಗನ್ನು 3ನೇ ಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದರ ಅಥವಾ ದರಗಳಿಗಿಂತ ಹೆಚ್ಚಾದ ದರ ಅಥವಾ ದರಗಳಲ್ಲಿ ಸಂಗ್ರಹಿಸತಕ್ಕದ್ದಲ್ಲ.

(2) ಯಾವುದೇ ವ್ಯಾಪಾರಿಯು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅವನು ಯಾವ ಸರಕುಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಯಾವುದೇ ತೆರಿಗೆಯನ್ನು ಸಂದಾಯ ಮಾಡಬೇಕಾಗಿಲ್ಲವೋ ಆ ಯಾವುವೇ ಸರಕುಗಳ ಪ್ರವೇಶದ ಬಗ್ಗೆ ತೆರಿಗೆಯ ರೂಪದಲ್ಲಿ ಅಥವಾ ತೆರಿಗೆಯ ರೂಪದಲ್ಲಿ ಎಂದು ತಾತ್ಪರ್ಯವಾಗುವ ಯಾವುದೇ ಮೊಬಲಗನ್ನು ಸಂಗ್ರಹಿಸತಕ್ಕದ್ದಲ್ಲ.

**(3ಖ) ತೆರಿಗೆಯ ಹೊಣೆಗಾರಿಕೆಗಿಂತ ಹೆಚ್ಚಾಗಿ ಸಂಗ್ರಹಿಸಿದ ಮೊಬಲಗುಗಳ ಮುಟ್ಟುಗೋಲು ಮತ್ತು 3ಕ ಪ್ರಕರಣವನ್ನು ಉಲ್ಲಂಘಿಸಿ ತೆರಿಗೆಯನ್ನು ಸಂಗ್ರಹಿಸುವುದಕ್ಕಾಗಿ ದಂಡ.–** ಯಾವನೇ ವ್ಯಾಪರಿಯು 3ಕ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ ಕರ ನಿರ್ಧರಣಾ ಪ್ರಾಧಿಕಾರಿಯು ಅಂಥ ವ್ಯಾಪಾರಿಗೆ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ ಬರಹದಲ್ಲಿನ ಆದೇಶದ ಮೂಲಕ ಅನಧಿಕೃತವಾಗಿ ಸಂಗ್ರಹಿಸಿದ ಅಥವಾ ನಿಯಮಿಸಿದ ದರಗಳಿಗಿಂತ ಹೆಚ್ಚಿನ ದರಗಳಲ್ಲಿ ಸಂಗ್ರಹಿಸಿದ ಮೊಬಲಗನ್ನು ದಂಡ ರೂಪದಲ್ಲಿ ಮುಟ್ಟುಗೋಲು ಹಾಕಿಕೊಳ್ಳಬಹುದು ಮತ್ತು ಇದರ ಜೊತೆಗೆ ಅಂಥ ಮೊಬಲಗಿನ ಒಂದೂವರೆಗಿಂತ ಹೆಚ್ಚಲ್ಲದ ಮೊಬಲಗನ್ನು ದಂಡರೂಪವಾಗಿ ಅವನ ಮೇಲೆ ವಿಧಿಸಬಹುದು.

ಪರಂತು, ಈ ಪ್ರಕರಣದ ಮೇರೆಗೆ ಯಾವುದೇ ವ್ಯವಹರಣೆಗಳನ್ನು ಯಾವ ವರ್ಷದಲ್ಲಿ ಆ ಮೊಬಲಗನ್ನು ಸಂಗ್ರಹಿಸಲಾಯಿತೋ, ಆ ವರ್ಷವು ಮುಕ್ತಾಯವಾದಂದಿನಿಂದ ಐದು ವರ್ಷಗಳ ಅವಧಿಯ ತರುವಾಯ ಪ್ರಾರಂಭಿಸತಕ್ಕದ್ದಲ್ಲ.

ಮತ್ತೂ ಪರಂತು, 21ನೇ ಪ್ರಕರಣದ ಮೇರೆಗಿನ ಅಪರಾಧಕ್ಕಾಗಿ ಯಾವುದೇ ಪ್ರಾಸಿಕ್ಯೂಷನ್‌ನನ್ನು, ಈ ಪ್ರಕರಣದ ಮೇರೆಗೆ, ಯಾವ ಸಂಗತಿಗಳಿಗೆ ಸಂಬಂಧಿಸಿದಂತೆ ದಂಡವನ್ನು ವಿಧಿಸಲಾಯಿತೋ, ಅವೇ ಸಂಗತಿಗಳಿಗೆ ಸಂಬಂಧಿಸಿದಂತೆ ಹೂಡತಕ್ಕದ್ದಲ್ಲ.

**4. ವ್ಯಾಪಾರಿಗಳ ನೋಂದಣಿ.–** (1) ಅನುಸೂಚಿತ ಸರಕುಗಳನ್ನು ಖರೀದಿಸುವ ಅಥವಾ ಸ್ವೀಕರಿಸುವ ಮತ್ತು ಸ್ಥಳೀಯ ಪ್ರದೇಶದಲ್ಲಿ ವ್ಯವಹಾರ ಮಾಡುತ್ತಿರುವ ಮತ್ತು 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ (ಕರ್ನಾಟಕ ಅಧಿನಿಯಮ 1957ರ 25) ಮೇರೆಗೆ ಅಥವಾ ಕಾಮಗಾರಿ ಕರಾರುಗಳನ್ನು ನಿರ್ವಹಿಸುತ್ತಿರುವ ವ್ಯಕ್ತಿಯ ಸಂದರ್ಭದಲ್ಲಿ ಸಂದರ್ಭಾನುಸಾರ ಅದರಿಂದ ಬರುವ ಒಬ್ಬ ಆದಾಯವು ಅಥವಾ ವರ್ಷದಲ್ಲಿ ಅವೆರಡರ ಒಟ್ಟು ನಲವತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿಲ್ಲದಿರುವ ಪ್ರತಿಯೊಬ್ಬ ವ್ಯಾಪಾರಿಯು, ಆ ಅಧಿನಿಯಮದ ಮೇರೆಗೆ ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಅವಧಿಯೊಳಗೆ ತನ್ನನ್ನು ನೋಂದಾಯಿಸಿಕೊಳ್ಳತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ನೋಂದಣಿಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಫೀಜನ್ನು ಸಂದಾಯ ಮಾಡಿದ ಮೇಲೆ ಮತ್ತು ಅಂಥ ಅವಧಿಗಾಗಿ ಮಾಡಬಹುದು.

(3) ನೋಂದಾಯಿತನಾದ ಪ್ರತಿಯೊಬ್ಬ ವ್ಯಾಪಾರಿಯು ತಾನು ವ್ಯವಹರಿಸಿದ ಅನುಸೂಚಿತ ಸರಕುಗಳ ನಿಜವಾದ ಮತ್ತು ಸರಿಯಾದ ಲೆಕ್ಕವನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ವಿವರಗಳೊಂದಿಗೆ ಇಡತಕ್ಕದ್ದು.

## ಅಧ್ಯಾಯ – III

## ತೆರಿಗೆಗಳ ವಿವರ ಪಟ್ಟಿಕೆ, ಕರನಿರ್ಧರಣೆ, ಸಂದಾಯ, ವಸೂಲಿ ಮತ್ತು ಸಂಗ್ರಹಣೆ

**5. ವಿವರಪಟ್ಟಿಕೆಗಳು ಮತ್ತು ಕರ ನಿರ್ಧರಣೆ.–** (1) 7ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ನೋಂದಾಯಿತನಾದ ಪ್ರತಿಯೊಬ್ಬ ವ್ಯಾಪಾರಿಯು ಪ್ರತಿವರ್ಷ ನಿಯಮಿಸಬಹುದಾದಂಥ ಅವಧಿಯೊಳಗೆ ಮತ್ತು ಅಂಥ ರೀತಿಯಲ್ಲಿ ಅಂಥ ವಿವರಗಳೊಂದಿಗೆ ಕರನಿರ್ಧರಣಾ ಪ್ರಾಧಿಕಾರಿಗೆ ವಿವರಪಟ್ಟಿಕೆಯನ್ನು ಸಲ್ಲಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಯಾವನೇ ನೋಂದಾಯಿತ ವ್ಯಾಪಾರಿಯು ಯಾವುದೇ ವಿವರಪಟ್ಟಿಕೆಯನ್ನು ಸಲ್ಲಿಸುವುದಕ್ಕೆ ಮುಂಚೆ ಅವನು 7ನೇ ಪ್ರಕರಣದ ಮೇರೆಗೆ ಈಗಾಗಲೇ ಸಂದಾಯ ಮಾಡಿದ ಯಾವುದೇ ತೆರಿಗೆಯನ್ನು ಕಡಿಮೆ ಮಾಡಲಾದಂತೆ ಅಂಥ ವಿವರಪಟ್ಟಿಕೆಯ ಆಧಾರದ ಮೇಲೆ ಅವನು ಸಂದಾಯ ಮಾಡಬೇಕಾದ ತೆರಿಗೆಯ ಪೂರ್ಣ ಮೊಬಲಗನ್ನು ಮುಂಗಡವಾಗಿ ನಿಯಮಿಸಿದ ರೀತಿಯಲ್ಲಿ ಸಂದಾಯ ಮಾಡತಕ್ಕದ್ದು ಮತ್ತು ವಿವರಪಟ್ಟಿಕೆಯ ಜೊತೆಗೆ ಅಂಥ ತೆರಿಗೆ ಸಂದಾಯದ ಬಗ್ಗೆ ತೃಪ್ತಿಕರವಾದ ರುಜುವಾತನ್ನು ಒದಗಿಸತಕ್ಕದ್ದು. ಅಂತಿಮ ಕರ ನಿರ್ಧರಣೆಯನ್ನು ಮಾಡಿದ ತರುವಾಯ ಹಾಗೆ ಸಂದಾಯ ಮಾಡಿದ ತೆರಿಗೆಯ ಮೊಬಲಗನ್ನು ಅಂತಿಮವಾಗಿ ಕರ ನಿರ್ಧರಣೆ ಮಾಡಿದ ತೆರಿಗೆಯ ಬಗ್ಗೆ ಸಂದಾಯ ಮಾಡಿರುವುದಾಗಿ ಭಾವಿಸತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಲಾದ ಯಾವುದೇ ವಿವರ ಪಟ್ಟಿಕೆಯು ಸರಿಯಾಗಿದೆಯೆಂದು ಮತ್ತು ಸಂಪೂರ್ಣವಾಗಿದೆಯೆಂದು ಕರನಿರ್ಧರಣಾ ಪ್ರಾಧಿಕರಿಯು ಸಮಾಧಾನ ಹೊಂದಿದರೆ, ಅವನು ಅದರ ಆಧಾರದ ಮೇಲೆ ವ್ಯಾಪಾರಿಯ ಬಗ್ಗೆ ಕರ ನಿರ್ಧರಿಸತಕ್ಕದ್ದು.

(4) ನಿಯಮಿಸಿದ ಅವಧಿಗೆ ಮುಂಚೆ (1)ನೇ ಉಪ ಪ್ರಕರಣದ ಮೇರೆಗೆ ವ್ಯಾಪಾರಿಯು ವಿವರಪಟ್ಟಿಕೆಯನ್ನು ಸಲ್ಲಿಸದಿದ್ದರೆ ಅಥವಾ ಅವನು ಸಲ್ಲಿಸಿದ ವಿವರ ಪಟ್ಟಿಕೆಯು ಸರಿಯಾಗಿಲ್ಲವೆಂದು ಅಥವಾ ಪೂರ್ಣವಾಗಿದೆಯೆಂದು ಕರ ನಿರ್ಧರಣಾ ಪ್ರಾಧಿಕಾರಿಗೆ ಕಂಡುಬಂದರೆ ಅವನು ಅಂಥ ನಿರ್ಧರಣೆಯ ಬಗೆಗಿನ ಕಾರಣಗಳನ್ನು ದಾಖಲು ಮಾಡಿ, ತನ್ನ ಅತ್ಯುತ್ತಮ ವಿವೇಚನಾನುಸಾರ ನೋಂದಾಯಿತ ವ್ಯಾಪಾರಿಯ ಬಗ್ಗೆ ಕರ ನಿರ್ಧರಿಸತಕ್ಕದ್ದು.

ಪರಂತು, ಈ ಉಪಕರಣದ ಮೇರೆಗೆ ಕ್ರಮವನ್ನು ಕೈಗೊಳ್ಳಲು ಮೊದಲು ನೋಂದಾಯಿತ ವ್ಯಾಪಾರಿಗೆ ಅವನು ಸಲ್ಲಿಸಿದ ವಿವರಪಟ್ಟಿಕೆಯ ಸರಿತನ ಮತ್ತು ಪೂರ್ಣತೆಯನ್ನು ರುಜುವಾತು ಮಾಡಲು ಯುಕ್ತ ಅವಕಾಶವನ್ನು ಕೊಡತಕ್ಕದ್ದು.

(5) (4)ನೇ ಉಪಪ್ರಕರಣದ ಮೇರೆಗೆ ಯಾವುದೇ ಕರನಿರ್ಧರಣೆಯನ್ನು ಮಾಡುವಾಗ ಕರ ನಿರ್ಧರಣಾ ಪ್ರಾಧಿಕಾರಿಯು, ನೋಂದಾಯಿತ ವ್ಯಾಪಾರಿಯನ್ನು ಕರ ನಿರ್ಧರಿಸಿದ ತೆರಿಗೆಯ ಜೊತೆಗೆ ನೋಂದಾಯಿತ ವ್ಯಾಪಾರಿಯು ಸಂದರ್ಭಾನುಸಾರ ತನ್ನ ವಿವರ ಪಟ್ಟಿಕೆಯಲ್ಲಿ ಬಹಿರಂಗಪಡಿಸದಿದ್ದ ಬಾಕಿಯಾಗುವ ತೆರಿಗೆಯ ಮೊಬಲಗಿನ ಒಂದೂವರೆಯಷ್ಟನ್ನು ಮೀರದ ದಂಡವನ್ನು ಅಥವಾ ವಿವರ ಪಟ್ಟಿಕೆಯನ್ನು ಸಲ್ಲಿಸಲು ತಪ್ಪಿದ ಸಂದರ್ಭದಲ್ಲಿ ಕರ ನಿರ್ಧರಿಸಿದ ತೆರಿಗೆಯ ಒಂದೂವರೆಯಷ್ಟನ್ನು ಸಂದಾಯ ಮಾಡುವಂತೆ ವ್ಯಾಪಾರಿಗೆ ನಿರ್ದೇಶಿಸಬಹುದು.

**6. ಕರನಿರ್ಧರಣೆಯಿಂದ ತಪ್ಪಿಸಿಕೊಳ್ಳುವ ಸರಕುಗಳ ಪ್ರವೇಶಕ್ಕಾಗಿ ತೆರಿಗೆ ಸಂದಾಯ.–** (1) ಯಾವುದೇ ಕಾರಣಕ್ಕಾಗಿ ನೋಂದಾಯಿತ ವ್ಯಾಪಾರಿಯು ತಂದ ಎಲ್ಲ ಅಥವಾ ಯಾವುದೇ ಅನುಸೂಚಿತ ಸರಕುಗಳು ತೆರಿಗೆ ನಿರ್ಧರಣೆಯಿಂದ ತಪ್ಪಿಸಿಕೊಂಡಿರುವಲ್ಲಿ ಕರನಿರ್ಧರಣಾ ಪ್ರಾಧಿಕಾರಿಯು, (3)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ತೆರಿಗೆಯು ಯಾವ ವರ್ಷಕ್ಕೆ ಸಂಬಂಧಿಸುತ್ತದೋ ಆ ವರ್ಷದ ಮುಕ್ತಾಯದಿಂದ ಐದು ವರ್ಷಗಳ ಅವಧಿಯೊಳಗೆ ಯಾವುದೇ ಕಾಲದಲ್ಲಿ ವ್ಯಾಪಾರಿಗೆ ನೋಟೀಸನ್ನು ಕೊಟ್ಟ ತರುವಾಯ ಮತ್ತು ತಾನು ಅವಶ್ಯವೆಂದು ಪರಿಗಣಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ ಅಂಥ ಸರಕುಗಳ ಮೇಲೆ ಸಂದಾಯವಾಗಬೇಕಾದ ತೆರಿಗೆಯನ್ನು ತನ್ನ ಅತ್ಯುತ್ತಮ ವಿವೇಚನಾನುಸಾರವಾಗಿ ನಿರ್ಧರಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಕರನಿರ್ಧರಣೆ ಮಾಡುವಲ್ಲಿ ಕರನಿರ್ಧರಣಾ ಪ್ರಾಧಿಕಾರಿಯು, ಕರನಿರ್ಧರಣೆಯಿಂದ ತಪ್ಪಿಸಿಕೊಂಡಿರುವುದು ನೋಂದಾಯಿತ ವ್ಯಾಪಾರಿಯು ಅಂಥ ಸರಕುಗಳ ಬಗ್ಗೆ ಉದ್ದೇಶಪೂರ್ವಕವಾಗಿ ಬಹಿರಂಗಪಡಿಸದಿದ್ದುದರಿಂದ ಉಂಟಾದುದೆಂದು ಮನದಟ್ಟಾದರೆ (1)ನೇ ಉಪಪ್ರಕರಣದ ಮೇರೆಗೆ ಕರನಿರ್ಧರಿಸಿದ ತೆರಿಗೆಯ ಜೊತೆಗೆ ಹಾಗೆ ನಿರ್ಧರಿಸಿದ ತೆರಿಗೆಯ ಒಂದೂವರೆಯಷ್ಟನ್ನು ಮೀರದಂತೆ ದಂಡವನ್ನು ಸಂದಾಯ ಮಾಡುವಂತೆ ಅವನನ್ನು ನಿರ್ದೇಶಿಸಬಹುದು :

ಪರಂತು, ಈ ಉಪಪ್ರಕರಣದ ಮೇರೆಗೆ ಯಾವುದೇ ದಂಡವನ್ನು ಬಾಧಿತನಾದ ವ್ಯಾಪಾರಿಗೆ ಅಂಥ ವಿಧಿಸುವಿಕೆಯ ವಿರುದ್ಧ ಕಾರಣವನ್ನು ತೋರಿಸಲು ಯುಕ್ತ ಅವಕಾಶ ಕೊಟ್ಟ ಹೊರತು ಸಂದಾಯ ಮಾಡುವಂತೆ ನಿರ್ದೇಶಿಸತಕ್ಕದ್ದಲ್ಲ.

(3) ಈ ಪ್ರಕರಣದ ಮೇರೆಗೆ ಕರನಿರ್ಧರಣೆಗಾಗಿ ಕಾಲ ಪರಿಮಿತಿಯ ಅವಧಿಯನ್ನು ಲೆಕ್ಕಹಾಕುವಲ್ಲಿ ಯಾವುದೇ ನ್ಯಾಯಾಲಯದಿಂದ ಅಥವಾ ಇತರ ಪ್ರಾಧಿಕಾರಿಯಿಂದ ಕೊಡಲಾದ ಯಾವುದೇ ತಡೆಯಾದೇಶದ ಕಾರಣಕ್ಕಾಗಿ ಅಥವಾ ಇರುವ ಅಪೀಲು ಅಥವಾ ಇತರ ವ್ಯವಹರಣೆಯ ಇತ್ಯರ್ಥದಲ್ಲಿ ಸಂಗತಿಯ ಕಾರಣಕ್ಕಾಗಿ ಕರನಿರ್ಧರಣೆಯನ್ನು ಮುಂದೂಡಲಾಗಿರುವ ಕಾಲವನ್ನು ಬಿಟ್ಟುಬಿಡತಕ್ಕದ್ದು.

**7. ಮುಂಗಡವಾಗಿ ತೆರಿಗೆಯ ಸಂದಾಯ.–** (1) ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು ಕರನಿರ್ಧರಣಾ ಪ್ರಾಧಿಕಾರಕ್ಕೆ ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರುವ ಒಂದು ವಿವರ ಪತ್ರವನ್ನು ಪ್ರತಿ ತಿಂಗಳು ಕಳುಹಿಸತಕ್ಕದ್ದು ಮತ್ತು ಸ್ಥಳೀಯ ಪ್ರದೇಶದೊಳಕ್ಕೆ ಹಿಂದಿನ ತಿಂಗಳಲ್ಲಿ ಅವನು ತಂದಿರುವ ಅನುಸೂಚಿತ ಸರಕುಗಳ ಆಧಾರದ ಮೇಲೆ ತಾನು ಸಂದಾಯ ಮಾಡಬೇಕಾದ ತೆರಿಗೆಯ ಪೂರ್ಣಮೊಬಲಗನ್ನು ಮುಂಗಡವಾಗಿ ಸಂದಾಯಮಾಡತಕ್ಕದ್ದು ಮತ್ತು ಹಾಗೆ ಸಂದಾಯ ಮಾಡಬೇಕಾದ ಮೊಬಲಗನ್ನು 8ನೇ ಪ್ರಕರಣದ (4)ನೇ ಉಪ ಪ್ರಕರಣದ ಉದ್ದೇಶಕ್ಕಾಗಿ ಈ ಅಧಿನಿಯಮದ ಮೇರೆಗೆ ಅಂಥ ವ್ಯಾಪಾರಿಯಿಂದ ಬಾಕಿಯಿರುವ ಮೊಬಲಗು ಎಂದು ಭಾವಿಸತಕ್ಕದ್ದು.

(2) ವರ್ಷದ ಕೊನೆಯಲ್ಲಿ ಯಾವನೇ ನೋಂದಾಯಿತ ವ್ಯಾಪಾರಿಯು ಯಾವುದೇ ತಿಂಗಳಿಗಾಗಿ ಅಥವಾ ಒಟ್ಟಿನಲ್ಲಿ ಒಂದು ಪೂರ್ಣ ವರ್ಷಕ್ಕಾಗಿ ಮುಂಗಡವಾಗಿ ಸಂದಾಯ ಮಾಡಿದ ತೆರಿಗೆ ಮೊಬಲಗು ಸಂದರ್ಭಾನುಸಾರ ಆ ತಿಂಗಳಿಗಾಗಿ ಸಂದಾಯ ಮಾಡಬೇಕಾದ ಅಥವಾ ತೆರಿಗೆಯನ್ನು ಅಂತಿಮವಾಗಿ ನಿರ್ಧರಿಸಲಾದಂತೆ ಪೂರ್ಣ ವರ್ಷಕ್ಕಾಗಿ ಸಂದಾಯ ಮಾಡಬೇಕಾದ ತೆರಿಗೆಗಿಂತ ಶೇಕಡಾ ಹದಿನೈದಕ್ಕಿಂತ ಹೆಚ್ಚಿಗೆಯಾಗಿ ಕಡಿಮೆಯಿರುವುದೆಂದು ಕಂಡುಬಂದಲ್ಲಿ ಸಂದಾಯ ಮಾಡಿದ ತೆರಿಗೆಯ ಕರನಿರ್ಧರಣಾ ಪ್ರಾಧಿಕಾರಿಯು ಸಂದರ್ಭಾನುಸಾರ ಆ ತಿಂಗಳಿಗಾಗಿ ಅಥವಾ ಪೂರ್ಣ ವರ್ಷಕ್ಕಾಗಿ ಸಂದಾಯ ಮಾಡಬೇಕಾದ ತೆರಿಗೆಗಿಂತ ಕಡಿಮೆ ಬೀಳುವಷ್ಟರ ಒಂದೂವರೆಯಷ್ಟಕ್ಕೆ ಮೀರದ ಮೊತ್ತವನ್ನು ತೆರಿಗೆಯ ಜೊತೆಗೆ ದಂಡ ರೂಪದಲ್ಲಿ ಸಂದಾಯ ಮಾಡಬೇಕೆಂದು ಅಂಥ ವ್ಯಾಪಾರಿಗೆ ನಿರ್ದೇಶಿಸಬಹುದು :

ಪರಂತು, ಈ ಉಪಪ್ರಕರಣದ ಮೇರೆಗೆ ಯಾವುದೇ ದಂಡವನ್ನು ಹಾಗೆ ವಿಧಿಸುವುದರ ವಿರುದ್ಧ ಬಾಧಿತನಾದ ವ್ಯಾಪಾರಿಗೆ ಕಾರಣ ತೋರಿಸಲು ಯುಕ್ತ ಅವಕಾಶವನ್ನು ಕೊಟ್ಟ ಹೊರತು ವಿಧಿಸತಕ್ಕದ್ದಲ್ಲ.

**8. ತೆರಿಗೆ ಸಂದಾಯ ಮತ್ತು ವಸೂಲಿ.–** (1) ಈ ಅಧಿನಿಯಮದ ಮೇರೆಗಿನ ತೆರಿಗೆಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಂತುಗಳಲ್ಲಿ ಯಾವುದಾದರೂ ಇದ್ದರೆ ಮತ್ತು ಅಂಥ ಕಾಲದೊಳಗೆ ಸಂದಾಯ ಮಾಡತಕ್ಕದ್ದು.

(2) (1)ನೇ ಉಪಪ್ರಕರಣಕ್ಕನುಸಾರವಾಗಿ ಸಂದಾಯ ಮಾಡಲು ತಪ್ಪಿದಲ್ಲಿ ;–

(i) ಹಾಗೆ ಕೊಡಲು ತಪ್ಪಿದ ದಿನಾಂಕದಂದು ಬಾಕಿ ನಿಂತಿರುವ ಪೂರ್ಣ ಮೊಬಲಗು ಕೂಡಲೆ ಬಾಕಿಯಾಗತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ತೆರಿಗೆಯನ್ನು ಸಂದಾಯ ಮಾಡಲು ಹೊಣೆಯಾಗಿರುವ ವ್ಯಕ್ತಿ ಅಥವಾ ವ್ಯಕ್ತಿಗಳ ಸ್ವತ್ತಿನ ಮೇಲೆ ಅದು ಋಣಭಾರವಾಗಿರತಕ್ಕದ್ದು.

(ii) ಈ ಅಧಿನಿಯಮದ ಮೇರೆಗೆ ತೆರಿಗೆಯನ್ನು ಸಂದಾಯ ಮಾಡಲು ಹೊಣೆಯಾಗಿರುವ ವ್ಯಕ್ತಿ ಅಥವಾ ವ್ಯಕ್ತಿಗಳು;

(ಕ) (1)ನೇ ಉಪಪ್ರಕರಣದ ಮೇರೆಗೆ ನಿಯಮಿಸಲಾದ ಕಾಲವು ಮುಕ್ತಾಯವಾದ ತರುವಾಯ ಮೊದಲು ಮೂರು ತಿಂಗಳಿಗಾಗಿ ಪ್ರತಿ ತಿಂಗಳು ಸಂದಾಯ ಮಾಡದೆ ಉಳಿದ ತೆರಿಗೆಯ ಮೊಬಲಗಿನ ಶೇಕಡಾ ಒಂದರಷ್ಟಕ್ಕೆ ; ಮತ್ತು

(ಖ) ಹಿಂದೆ ಹೇಳಿದಂತೆ ಮೊದಲ ಮೂರು ತಿಂಗಳ ತರುವಾಯದ ಪ್ರತಿ ತಿಂಗಳ ಅಂಥ ಮೊಬಲಗಿನ ಶೇಕಡಾ ಎರಡೂವರೆಯಷ್ಟಕ್ಕೆ ;

– ಸಮನಾದ ದಂಡವನ್ನು ಸಂದಾಯ ಮಾಡತಕ್ಕದ್ದು.

**ವಿವರಣೆ.–** (ii)ನೆಯ ಖಂಡದ ಉದ್ದೇಶಗಳಿಗಾಗಿ ತಿಂಗಳಿನ ಒಂದು ಭಾಗಕ್ಕಾಗಿ ಸಂದಾಯ ಮಾಡಬೇಕಾದ ದಂಡವನ್ನು ಪ್ರಮಾಣಾನುಸಾರವಾಗಿ ನಿರ್ಧರಿಸತಕ್ಕದ್ದು.

(3) (2)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಯಾವನೇ ವ್ಯಕ್ತಿಯು ಅಥವಾ ವ್ಯಕ್ತಿಗಳ ವರ್ಗವು ಯಾವುದೇ ಅವಧಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ದಂಡದ ಪೂರ್ಣ ಅಥವಾ ಯಾವುದೇ ಭಾಗವನ್ನು ಮಾಫಿ ಮಾಡಬಹುದು.

(4) ನಿರ್ಧರಿಸಲಾದ ಯಾವುದೇ ತೆರಿಗೆ ಅಥವಾ ಈ ಅಧಿನಿಯಮದ ಮೇರೆಗೆ ನೋಂದಾಯಿತವಾದ ವ್ಯಾಪಾರಿಯಿಂದ ಬಾಕಿಯಿರುವ ಯಾವುದೇ ಇತರ ಮೊಬಲಗನ್ನು ಸಂಗ್ರಹಣೆಯ ಯಾವುದೇ ಇತರ ವಿಧಾನಕ್ಕೆ ಬಾಧಕವಾಗದಂತೆ ;

(ಕ) ಅದು ಭೂಕಂದಾಯದ ಬಾಕಿಯಾಗಿದ್ದರೆ ಹೇಗೋ ಹಾಗೆ ; ಅಥವಾ

(ಖ) ನಿಯಮಿಸಬಹುದಾದಂಥ ನಿಯಮಗಳಿಗನುಸಾರವಾಗಿ ನಿಯಮಿಸಲಾದ ಅಧಿಕಾರಿಯು, ಅಂಥ ವ್ಯಾಪಾರಿಯು ಅಥವಾ ಯಾವನೇ ಇತರ ವ್ಯಕ್ತಿಯ ಯಾವುದೇ ಸ್ವತ್ತನ್ನು ಜಪ್ತಿಮಾಡುವ ಮತ್ತು ಮಾರಾಟ ಮಾಡುವ ಮೂಲಕ ಅಥವಾ ಜಪ್ತಿಮಾಡದೆ ಅದನ್ನು ಮಾರಾಟ ಮಾಡುವ ಮೂಲಕ ;

(ಗ) 1973ರ ದಂಡ ಪ್ರಕ್ರಿಯಾ ಸಂಹಿತೆಯಲ್ಲಿ (1974ರ ಕೇಂದ್ರಾಧಿನಿಯಮ 2) ಏನೇ ಅಡಕವಾಗಿದ್ದಾಗ್ಯೂ ಯಾವನೇ ಮ್ಯಾಜಿಸ್ಟ್ರೇಟನಿಗೆ ಅರ್ಜಿ ಸಲ್ಲಿಸುವ ಮೂಲಕ ಅಂಥ ಮ್ಯಾಜಿಸ್ಟ್ರೇಟನು ದಂಡ ವಿಧಿಸಿದ್ದರೆ ಹೇಗೋ ಹಾಗೆ,

– ಅಂಥ ಮ್ಯಾಜಿಸ್ಟ್ರೇಟನ ಮೂಲಕ ವಸೂಲಿ ಮಾಡಬಹುದು :

ಪರಂತು, ಈ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ಆದೇಶದ ಬಗ್ಗೆ ಅಥವಾ ಪುನರೀಕ್ಷಣೆಗಾಗಿ ನೋಂದಾಯಿತ ವ್ಯಾಪಾರಿಯು ಅಪೀಲು ಅಥವಾ ಪುನರೀಕ್ಷಣೆಗಾಗಿ ಅರ್ಜಿಯನ್ನು ಮತ್ತು ತೆರಿಗೆ ಅಥವಾ ಇತರ ಮೊಬಲಗಿನ ಸಂದಾಯದ ಬಗ್ಗೆ ಅಪೀಲು ಅಥವಾ ಪುನರೀಕ್ಷಣಾ ಪ್ರಾಧಿಕಾರಿಯು ಮಾಡಿದ ಆದೇಶವನ್ನು ಪಾಲಿಸಿರುವಲ್ಲಿ ಅಂಥ ಅಪೀಲನ್ನು ಅಥವಾ ಪುನರೀಕ್ಷಣಾ ಅರ್ಜಿಯ ವಿಲೆ ಆಗುವ ತನಕ ಈ ಉಪ-ಪ್ರಕರಣದ ಮೇರೆಗೆ ವಸೂಲಿಗಾಗಿ ಯಾವುದೇ ವ್ಯವಹರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ ಅಥವಾ ಅವುಗಳನ್ನು ಮುಂದುವರಿಸತಕ್ಕದ್ದಲ್ಲ.

**9. ಕೆಲವು ಇತರ ವ್ಯಕ್ತಿಗಳಿಂದ ತೆರಿಗೆಯ ವಸೂಲಿ.–** (1) ಕರನಿರ್ಧರಣೆಯ ಪ್ರಾಧಿಕಾರಿಯು ಯಾವುದೇ ಕಾಲದಲ್ಲಿ ಅಥವಾ ಕಾಲಕಾಲಕ್ಕೆ ಬರಹದಲ್ಲಿನ ನೋಟೀಸಿನ ಮೂಲಕ (ಅದರ ಒಂದು ಪ್ರತಿಯನ್ನು ನಿರ್ಧರಿಸಿದ ಯಾವುದೇ ತೆರಿಗೆಯು ಬಾಕಿಯಿರುವ ನೋಂದಾಯಿತ ವ್ಯಾಪಾರಿಗೆ ಕರ ನಿರ್ಧರಣಾ ಪ್ರಾಧಿಕಾರಿಗೆ ತಿಳಿದ ಅವನ ಕೊನೆಯ ವಿಳಾಸಕ್ಕೆ ಕಳುಹಿಸತಕ್ಕದ್ದು) ನೋಂದಾಯಿತ ವ್ಯಾಪಾರಿಗೆ ಯಾರಿಂದ ಹಣ ಬಾಕಿ ಇರುವುದೋ ಆ ಯಾವನೇ ವ್ಯಕ್ತಿಯನ್ನು ಅಥವಾ ನೋಂದಾಯಿತ ವ್ಯಾಪಾರಿಗಾಗಿ ಅಥವಾ ಅವನ ನಿಮಿತ್ತವಾಗಿ ಹಣವನ್ನು ಧಾರಣ ಮಾಡಿರುವ ಅಥವಾ ಆ ತರುವಾಯ ಧಾರಣ ಮಾಡಬಹುದಾದಂಥ ಯಾವನೇ ವ್ಯಕ್ತಿಯನ್ನು ಕರ ನಿರ್ಧರಣಾ ಪ್ರಾಧಿಕಾರಿಗೆ ಬಾಕಿಯಾದ ಮೇಲೆ ತಕ್ಷಣ ಅಥವಾ ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಕಾಲದಲ್ಲಿ ಅಥವಾ ಕಾಲದೊಳಗೆ ಧಾರಣ ಮಾಡಿರುವಾಗ (ಹಣವು ಬಾಕಿ ಆಗುವುದಕ್ಕಿಂತ ಅಥವಾ ಧಾರಣ ಮಾಡುವುದರ ಮುಂಚಿತವಾಗಿಲ್ಲ) ನೋಂದಾಯಿತ ವ್ಯಾಪಾರಿಯಿಂದ ತೆರಿಗೆಯ ಬಾಕಿಗಳ ಅಥವಾ ದಂಡಕ್ಕೆ ಸಂಬಂಧಿಸಿದಂತೆ ಮೊಬಲಗಿಗೆ ಸಮಾನವಾದಾಗ ಅಥವಾ ಅದಕ್ಕೆ ಕಡಿಮೆಯಾದಾಗ ಆ ಹಣದ ಪೂರಾ ಮೊಬಲಗನ್ನು ಸಂದಾಯ ಮಾಡಲು ಸಾಕಾಗಬಹುದಾದಷ್ಟು ಹಣವನ್ನು ಸಂದಾಯ ಮಾಡಲು ಅಗತ್ಯಪಡಿಸಬಹುದು.

(2) ಕರ ನಿರ್ಧರಣಾ ಪ್ರಾಧಿಕಾರಿಯು ಯಾವುದೇ ಕಾಲದಲ್ಲಿ ಅಥವಾ ಕಾಲಕಾಲಕ್ಕೆ ಯಾವುದೇ ಅಂಥ ನೋಟೀಸನ್ನು ತಿದ್ದುಪಡಿ ಮಾಡಬಹುದು ಅಥವಾ ರದ್ದುಗೊಳಿಸಬಹುದು ಅಥವಾ ನೋಟೀಸಿಗನುಸಾರವಾಗಿ ಯಾವುದೇ ಸಂದಾಯವನ್ನು ಮಾಡುವುದಕ್ಕಾಗಿನ ಆ ಕಾಲವನ್ನು ವಿಸ್ತರಿಸಬಹುದು.

(3) ಈ ಪ್ರಕರಣದ ಮೇರೆಗಿನ ನೋಟೀಸಿನ ಪಾಲನೆಯಲ್ಲಿ ಸಂದಾಯವನ್ನು ಮಡುವ ಯಾವನೇ ವ್ಯಕ್ತಿಯು ನೋಂದಾಯಿತ ವ್ಯಾಪಾರಿಯ ಪ್ರಾಧಿಕಾರದ ಮೇರೆಗೆ ಸಂದಾಯವನ್ನು ಮಾಡಿರುವುದಾಗಿ ಭಾವಿಸತಕ್ಕದ್ದು ಮತ್ತು ಕರ ನಿರ್ಧರಣಾ ಪ್ರಾಧಿಕಾರಿಯ ಸ್ವೀಕೃತಿಯು ಅಂಥ ಸ್ವೀಕೃತಿಯಲ್ಲಿ ಉಲ್ಲೇಖಿಸಿದ ಮೊಬಲಗಿನಷ್ಟರ ಮಟ್ಟಿಗೆ ಅಂಥ ವ್ಯಕ್ತಿಯ ಹೊಣೆಗಾರಿಕೆಯ ಬಗ್ಗೆ ತೀರಿಕೆಯಾಗಿರತಕ್ಕದ್ದು.

(4) ಈ ಪ್ರಕರಣದಲ್ಲಿ ಉಲ್ಲೇಖಿತವಾದ ನೋಟೀಸಿನ ಸ್ವೀಕೃತಿಯ ತರುವಾಯ ನೋಂದಾಯಿತ ವ್ಯಾಪಾರಿಗೆ ಯಾವುದೇ ಹೊಣೆಯನ್ನು ತೀರಿಸುವ ಯಾವನೇ ವ್ಯಕ್ತಿಯು ತೀರಿಸಲಾದ ಹೊಣೆಯಷ್ಟರ ಮಟ್ಟಿಗೆ ಅಥವಾ ಈ ಅಧಿನಿಯಮದ ಮೇರೆಗೆ ಬಾಕಿಯಿರುವ ಮೊಬಲಗಿಗಾಗಿ ನೋಂದಾಯಿತ ವ್ಯಾಪಾರಿಯ ಹೊಣೆಯಷ್ಟರಮಟ್ಟಿಗೆ ಇದರಲ್ಲಿ ಯಾವುದು ಕಡಿಮೆ ಯಾಗಿರುವುದೋ ಅದಕ್ಕೆ ಕರ ನಿರ್ಧರಣಾ ಪ್ರಾಧಿಕಾರಿಗೆ ವೈಯಕ್ತಿಕವಾಗಿ ಹೊಣೆಯಾಗಿರುವತಕ್ಕದ್ದು.

(5) ಯಾವ ವ್ಯಕ್ತಿಗೆ ಈ ಪ್ರಕರಣದ ಮೇರೆಗೆ ನೋಟೀಸನ್ನು ಕಳುಹಿಸಲಾಗಿದೆಯೋ ಆ ವ್ಯಕ್ತಿಯು ತಗಾದೆ ಮಾಡಲಾದ ಮೊತ್ತ ಅಥವಾ ಅದರ ಯಾವುದೇ ಭಾಗವು ತನ್ನಿಂದ ನೋಂದಾಯಿತ ವ್ಯಾಪಾರಿಗೆ ಬಾಕಿಯಿರುವುದಿಲ್ಲವೆಂಬ ಅಥವಾ ನೋಂದಾಯಿತ ವ್ಯಾಪಾರಿಗಾಗಿ ಅಥವಾ ಅವನ ನಿಮಿತ್ತವಾಗಿ ಯಾವುದೇ ಹಣವನ್ನು ಧಾರಣ ಮಾಡಿಲ್ಲವೆಂಬ ಕಾರಣದ ಮೇಲೆ ಅದಕ್ಕೆ ಆಕ್ಷೇಪಿಸಿದಲ್ಲಿ ಆಗ ಈ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ ತಗಾದೆ ಮಾಡಿದ ಮೊತ್ತದ ಅಥವಾ ಅದರ ಯಾವುದೇ ಭಾಗವನ್ನು ಕರನಿರ್ಧರಣಾ ಪ್ರಾಧಿಕಾರಿಗೆ ಸಂದಾಯ ಮಾಡಲು ಅಂಥ ವ್ಯಕ್ತಿಯನ್ನು ಅಗತ್ಯಪಡಿಸುವುದಾಗಿ ಭಾವಿಸತಕ್ಕದ್ದಲ್ಲ.

(6) ಈ ಪ್ರಕರಣದ ಮೇರೆಗೆ ಕರನಿರ್ಧರಣಾ ಪ್ರಾಧಿಕಾರಿಗೆ ವ್ಯಕ್ತಿಯು ಸಂದಾಯ ಮಾಡುವುದನ್ನು ಅಗತ್ಯ ಪಡಿಸಿದ ಯಾವುದೇ ಮೊಬಲಗು ಅಥವಾ ಕರ ನಿರ್ಧರಣಾ ಪ್ರಾಧಿಕಾರಿಗೆ ಅದಕ್ಕಾಗಿ ಅವನು ವೈಯಕ್ತಿಕವಾಗಿ ಹೊಣೆಯಾಗಿರುವಲ್ಲಿ ಅದು ಸಂದಾಯವಾಗದೇ ಇದ್ದಲ್ಲಿ ಸದರಿ ವ್ಯಕ್ತಿಯ ಸ್ವತ್ತುಗಳ ಮೇಲೆ ಅದು ಋಣ ಭಾರವಾಗಿರತಕ್ಕದ್ದು ಮತ್ತು ಅದನ್ನು ಭೂ ಕಂದಾಯದ ಬಾಕಿಯಾಗಿದ್ದರೆ ಹಾಗೆ ವಸೂಲ್ಮಾಡಬಹುದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ ನೋಂದಾಯಿತ ವ್ಯಾಪಾರಿಗೆ ಬಾಕಿಯಿರುವ ಮೊಬಲಗು ಅಥವಾ ನೋಂದಾಯಿತ ವ್ಯಾಪಾರಿಗಾಗಿ ಅಥವಾ ಅವನ, ನಿಮಿತ್ತ ಧಾರಣ ಮಾಡಿದ ಹಣವನ್ನು ಅಂಥ ನೋಂದಾಯಿತ ವ್ಯಾಪಾರಿಯಿಂದ ಅಂಥ ವ್ಯಕ್ತಿಗೆ ಸಂದಾಯಕ್ಕಾಗಿ ಬಾಕಿಯಾಗಿರಬಹುದಾದ ಮತ್ತು ಕಾನೂನು ಸಮ್ಮತವಾಗಿ ಅಸ್ತಿತ್ವದಲ್ಲಿರಬಹುದಾದಂಥ ಕ್ಲೇಮುಗಳು ಯಾವುದಾದರೂ ಇದ್ದರೆ ಅವುಗಳನ್ನು ಗಣನೆಗೆ ತೆಗೆದುಕೊಂಡ ತರುವಾಯ ಲೆಕ್ಕ ಹಾಕತಕ್ಕದ್ದು.

**10. ಫರ್ಮುಗಳ ಹೊಣೆ.–** (1) ಯಾವುದೇ ಫರ್ಮು ಈ ಅಧಿನಿಯಮದ ಮೇರೆಗೆ ಯಾವುದೇ ತೆರಿಗೆಯನ್ನು ಅಥವಾ ಇತರ ಮೊಬಲಗನ್ನು ಸಂದಾಯ ಮಾಡಲು ಹೊಣೆಯಾಗಿರುವಲ್ಲಿ ಫರ್ಮು ಮತ್ತು ಫರ್ಮಿನ ಪ್ರತಿಯೊಬ್ಬ ಪಾಲುದಾರನು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಅಂಥ ಸಂದಾಯಕ್ಕಾಗಿ ಹೊಣೆಯಾಗಿರತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ಫರ್ಮಿನ ಒಬ್ಬ ಪಾಲುದಾರನು ಯಾವುದೇ ತೆರಿಗೆ ಅಥವಾ ಇತರ ಮೊಬಲಗನ್ನು ಸಂದಾಯ ಮಾಡಲು ಹೊಣೆಗಾರನಾಗಿದ್ದು ನಿವೃತ್ತನಾದಲ್ಲಿ ತದ್ವಿರುದ್ಧವಾಗಿ ಯಾವುದೇ ಕರಾರು ಇದ್ದಾಗ್ಯೂ ಅವನು ತನ್ನ ನಿವೃತ್ತಿ ಕಾಲದಲ್ಲಿ ಸಂದಾಯ ಮಾಡದೇ ಹಾಗೆ ಉಳಿದಿರುವ ತೆರಿಗೆ ಅಥವಾ ಇತರ ಮೊಬಲಗನ್ನು ಅಥವಾ ನಿವೃತ್ತಿ ದಿನಾಂಕದವರೆಗೆ ಬಾಕಿಯಿರುವ ಇತರ ಮೊಬಲಗನ್ನು ಅದು ನಿರ್ಧರಣೆಯಾಗದಿದ್ದರೂ ಸಂದಾಯ ಮಾಡಲು ಹೊಣೆಯಾಗಿರತಕ್ಕದ್ದು.

**11. ವ್ಯವಹಾರದ ವರ್ಗಾವಣೆಯಾದ ಮೇಲೆ ಸಂದಾಯವಾಗಬೇಕಾದ ತೆರಿಗೆ ಇತ್ಯಾದಿ.–** (1) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾವುದೇ ತೆರಿಗೆ ಅಥವಾ ದಂಡ ಅಥವಾ ಯಾವುದೇ ಇತರ ಮೊಬಲಗನ್ನು ಸಂದಾಯ ಮಾಡಲು ಹೊಣೆಯಾಗಿರುವ ನೋಂದಾಯಿತ ವ್ಯಾಪಾರಿಯ ವ್ಯವಹಾರದ ಒಡೆತನವನ್ನು ವರ್ಗಾವಣೆ ಮಾಡಿದಲ್ಲಿ ವರ್ಗಾವಣೆಕಾರ ಮತ್ತು ವರ್ಗಾವಣೆ ಪಡೆದವನು ಸಂದಾಯವಾಗಬೇಕಾದ ಆದರೆ ವರ್ಗಾವಣೆಯ ಕಾಲದಲ್ಲಿ ಸಂದಾಯವಾಗದೆ ಉಳಿದಿರುವ ಯಾವುದೇ ತೆರಿಗೆ ಅಥವಾ ದಂಡ ಅಥವಾ ಯಾವುದೇ ಇತರೆ ಮೊಬಲಗನ್ನು ಸಂದಾಯ ಮಾಡಲು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹೊಣೆಗಾರರಾಗಿರತಕ್ಕದ್ದು ಮತ್ತು ವರ್ಗಾವಣೆ ಪಡೆದವನಿಂದ ವಸೂಲಿ ಮಾಡುವ ಉದ್ದೇಶಕ್ಕಾಗಿ ಅಂಥ ವರ್ಗಾವಣೆ ಪಡೆದವನನ್ನು ಈ ಅಧಿನಿಯಮದ ಮೇರೆಗೆ ತೆರಿಗೆ ಅಥವಾ ದಂಡ ಅಥವಾ ಇತರ ಮೊಬಲಗನ್ನು ಸಂದಾಯ ಮಾಡಲು ಹೊಣೆಗಾರನಾದ ನೋಂದಾಯಿತ ವ್ಯಾಪಾರಿ ಎಂದು ಭಾವಿಸತಕ್ಕದ್ದು.

(2) ತೆರಿಗೆಯನ್ನು ಅಥವಾ ದಂಡವನ್ನು ಸಂದಾಯ ಮಾಡಲು ಹೊಣೆಯಾಗಿರುವ ಫರ್ಮು ವಿಘಟಿತವಾದರೆ ತೆರಿಗೆಯ ನಿರ್ಧರಣೆ ಅಥವಾ ದಂಡದ ವಿಧಿಸುವಿಕೆಯನ್ನು ಆ ಫರ್ಮು ವಿಘಟನೆಯಾಗಿರದಿದ್ದರೆ ಹೇಗೋ ಹಾಗೆ ಮಾಡತಕ್ಕದ್ದು ಮತ್ತು ನಿರ್ಧರಿಸಲಾದ ಅಥವಾ ವಿಧಿಸಿದ ತೆರಿಗೆ ಅಥವಾ ದಂಡವನ್ನು ಸಂದಾಯ ಮಾಡಲು ವಿಘಟನೆಯ ಕಾಲದಲ್ಲಿ ಫರ್ಮಿನ ಪಾಲುಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಮೃತನಾದ ಅಂಥ ವ್ಯಕ್ತಿಯ ಕಾನೂನು ಸಮ್ಮತ ಪ್ರತಿನಿಧಿಯು ಜಂಟಿಯಾಗಿ ಅಥವಾ ಪ್ರತ್ಯೇಕವಾಗಿ ಹೊಣೆಯಾಗಿರತಕ್ಕದ್ದು.

(3) ಹಿಂದೂ ಅವಿಭಕ್ತ ಕುಟುಂಬ ಅಥವಾ ಅಳಿಯ ಸಂತಾನ ಕುಟುಂಬವು ತೆರಿಗೆ ಅಥವಾ ದಂಡವನ್ನು ಸಂದಾಯ ಮಾಡಲು ಹೊಣೆಯಾಗಿದ್ದು ವಿಭಜನೆಯಾದರೆ ತೆರಿಗೆ ನಿರ್ಧರಣೆಯನ್ನು ಅಥವಾ ದಂಡದ ವಿಧಿಸುವಿಕೆಯನ್ನು ಕುಟುಂಬದ ವಿಭಜನೆಯಾಗಿರದಿದ್ದರೆ ಹೇಗೋ ಹಾಗೆ ಮಾಡತಕ್ಕದ್ದು ಮತ್ತು ವಿಭಜನೆಗೆ ಮುಂಚೆ ಕುಟುಂಬದ ಸದಸ್ಯನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು ನಿರ್ಧರಿಸಲಾದ ಅಥವಾ ವಿಧಿಸಲಾದ ತೆರಿಗೆ ಅಥವಾ ದಂಡವನ್ನು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು.

(4) ನೋಂದಾಯಿತ ವ್ಯಾಪಾರಿಯು ಮೃತನಾದಲ್ಲಿ ಅವನ ಕಾರ್ಯ ನಿರ್ವಾಹಕ, ಆಡಳಿತಗಾರ ಅಥವಾ ಇತರೆ ಕಾನೂನು ಸಮ್ಮತ ಪ್ರತಿನಿಧಿಯನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ನೋಂದಾಯಿತ ವ್ಯಾಪಾರಿಯೆಂದು ಭಾವಿಸತಕ್ಕದ್ದು ಮತ್ತು ಸದರಿ ಮೃತಪಟ್ಟ ನೋಂದಾಯಿತ ವ್ಯಾಪಾರಿಯ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಈ ಅಧಿನಿಯಮದ ಉಪಬಂಧಗಳು ಅನ್ವಯವಾಗತಕ್ಕದ್ದು. ಪರಂತು ಅಂಥ ವ್ಯಾಪಾರಿಯು ಸಂದಾಯ ಮಾಡಬೇಕೆಂದು ನಿರ್ಧರಿಸಲಾದ ಯಾವುದೇ ತೆರಿಗೆ ಅಥವಾ ದಂಡಕ್ಕೆ ಸಂಬಂಧಿಸಿದಂತೆ ಅಥವಾ ಅವನು ಮೃತನಾಗಿರದಿದ್ದರೆ ಈ ಅಧಿನಿಯಮದ ಮೇರೆಗೆ ಅವನು ಸಂದಾಯ ಮಾಡಬೇಕಾಗಬಹುದಾಗಿದ್ದಂಥ ಯಾವುದೇ ತೆರಿಗೆ ಅಥವಾ ದಂಡದ ಬಗ್ಗೆ ಕಾರ್ಯ ನಿರ್ವಾಹಕ, ಆಡಳಿತಗಾರ ಅಥವಾ ಇತರ ಕಾನೂನು ಸಮ್ಮತ ಪ್ರತಿನಿಧಿಯು ತನ್ನ ವಶದಲ್ಲಿರುವ ಮೃತನ ಆಸ್ತಿಯಷ್ಟರಮಟ್ಟಿಗೆ ಮಾತ್ರ ಹೊಣೆಗಾರನಾಗಿರುತ್ತಾರೆ.

## ಅಧ್ಯಾಯ – IV

## ತೆರಿಗೆ ಪ್ರಾಧಿಕಾರಿಗಳು

**12. ತೆರಿಗೆ ಪ್ರಾಧಿಕಾರಿಗಳು.–** (1) ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರವು ನಿರ್ದಿಷ್ಟ ಪಡಿಸಬಹುದಾದಂಥ ವರ್ಗಗಳ ಮತ್ತು ಅಂಥ ಸಂಖ್ಯೆಯ ತೆರಿಗೆ ಪ್ರಾಧಿಕಾರಿಗಳು ಇರತಕ್ಕದ್ದು.

(2) (1)ನೇ ಉಪ–ಪ್ರಕರಣದ ಮೇರೆಗೆ ನಿರ್ದಿಷ್ಟಪಸಿದ ಪ್ರಾಧಿಕಾರಿಗಳನ್ನು ರಾಜ್ಯ ಸರ್ಕಾರವು ನೇಮಕ ಮಾಡತಕ್ಕದ್ದು ಮತ್ತು ಅವರು ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶಗಳಿಗೆ ಮತ್ತು ವ್ಯಕ್ತಿಗಳ ವರ್ಗಗಳಿಗೆ ಸಂಬಂಧಿಸಿದಂತೆ ಅಂಥ ಅಧಿಕಾರಗಳನ್ನು, ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ಚಲಾಯಿಸತಕ್ಕದ್ದು, ನಿರ್ವಹಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು.

(3) ಈ ಅಧಿನಿಯಮದ ಉದ್ದೇಶಗಳಿಗಾಗಿ ನೇಮಕಗೊಂಡ ಎಲ್ಲ ಅಧಿಕಾರಿಗಳು ಮತ್ತು ವ್ಯಕ್ತಿಗಳು ರಾಜ್ಯ ಸರ್ಕಾರದ ಮತ್ತು ಕಮೀಷನರ್‌ರವರ ಆದೇಶ, ಅನುಸೂಚನೆ ಮತ್ತು ನಿರ್ದೇಶನಗಳನ್ನು ಪಾಲಿಸತಕ್ಕದ್ದು ಮತ್ತು ಅನುಸರಿಸತಕ್ಕದ್ದು ;

ಪರಂತು, ಯಾವುದೇ ಅಪೀಲು ಪ್ರಾಧಿಕಾರದ ವಿವೇಚನಾನುಸಾರ ಅಪೀಲು ಪ್ರಕಾರ್ಯಗಳನ್ನು ಚಲಾಯಿಸುವಲ್ಲಿ ಅಂಥ ಯಾವುದೇ ಆದೇಶ, ಅನುಸೂಚನೆ ಅಥವಾ ನಿರ್ದೇಶನವು ಅಡ್ಡಿಬರುವಂತೆ ಕೊಡತಕ್ಕದ್ದಲ್ಲ.

## ಅಧ್ಯಾಯ – V

## ಅಪೀಲು ಮತ್ತು ಪುನರೀಕ್ಷಣೆ

**13. ಅಪೀಲುಗಳು.–** (1) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಲಾದ ಆದೇಶವು ತನ್ನನ್ನು ಬಾಧಿಸುವುದೆಂದು ಆಕ್ಷೇಪಿಸುವ ಯಾವನೇ ವ್ಯಕ್ತಿಯು (ಇದರಲ್ಲಿ ಇನ್ನು ಮುಂದೆ ಅಪೀಲು ಪ್ರಾಧಿಕಾರವೆಂದು ಉಲ್ಲೇಖಿತವಾದ) ನಿಯಮಿಸಬಹುದಾದಂಥ ಪ್ರಾಧಿಕಾರಕ್ಕೆ ಅಪೀಲನ್ನು ಸಲ್ಲಿಸಬಹುದು.

(2) ಅಪೀಲನ್ನು –

(i) ನಿರ್ಧರಣೆ ಆದೇಶಕ್ಕೆ ಸಂಬಂಧಿಸಿದಂತೆ ನಿರ್ಧರಣೆ ನೋಟೀಸನ್ನು ಅಪೀಲುದಾರನಿಗೆ ಜಾರಿ ಮಾಡಿದ ದಿನಾಂಕದಿಂದ ; ಮತ್ತು

(ii) ಇತರ ಯಾವುದೇ ಆದೇಶಕ್ಕೆ ಸಂಬಂಧಿಸಿದಂತೆ ಅಪೀಲುದಾರನಿಗೆ ಆದೇಶವನ್ನು ತಿಳಿಸಿದ ದಿನಾಂಕದಿಂದ –

ಮೂವತ್ತು ದಿನಗಳೊಳಗಾಗಿ ಸಲ್ಲಿಸತಕ್ಕದ್ದು ;

ಪರಂತು, ಅಪೀಲು ಪ್ರಾಧಿಕಾರವು ಅಪೀಲುದಾರನು ಆ ಅವಧಿಯೊಳಗೆ ಅಪೀಲನ್ನು ಸಲ್ಲಿಸದೆ ಇರಲು ಸಾಕಷ್ಟು ಕಾರಣಗಳಿವೆಯೆಂದು ಸಮಾಧಾನ ಹೊಂದಿದಲ್ಲಿ ಹಿಂದೆ ಹೇಳಿದ ಮೂವತ್ತು ದಿನಗಳ ಅವಧಿಯ ತರುವಾಯವೂ ಸಲ್ಲಿಸಿದ ಅಪೀಲನ್ನು ಸ್ವೀಕರಿಸಬಹುದು.

(3) (ಕ) ನಿರ್ಧರಣೆ ಆದೇಶದ ವಿರುದ್ಧದ ಯಾವುದೇ ಅಪೀಲನ್ನು, ಅದು ಅಪೀಲಿನಲ್ಲಿ ವಿವಾದಗ್ರಸ್ತವಿರದ ತೆರಿಗೆ ಮತ್ತು ದಂಡ ಸಂದಾಯದ ತೃಪ್ತಿಕರ ರುಜುವಾತಿನೊಂದಿಗಿರುವ ಹೊರತು ಅಪೀಲು ಪ್ರಾಧಿಕಾರವು ಸ್ವೀಕರಿಸತಕ್ಕದ್ದಲ್ಲ.

(ಖ) (1)ನೇ ಉಪಪ್ರಕರಣದ ಮೇರೆಗೆ ಅಪೀಲನ್ನು ಹೂಡಲಾಗಿದ್ದಾಗ್ಯೂ ತೆರಿಗೆ ಅಥವಾ ಇತರ ಮೊಬಲಗನ್ನು ಯಾವ ಆದೇಶದ ವಿರುದ್ಧ ಅಪೀಲನ್ನು ಹೂಡಲಾಗಿದೆಯೋ ಆ ಆದೇಶಕ್ಕನುಸಾರ ಸಂದಾಯ ಮಾಡತಕ್ಕದ್ದು ;

ಪರಂತು, ಅಪೀಲುದಾರನು ಅದರ ಸಮಾಧಾನಕ್ಕಾಗಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಸಾಕಷ್ಟು ಭದ್ರತೆಯನ್ನು ಒದಗಿಸಿದರೆ, ಅಪೀಲು ಪ್ರಾಧಿಕಾರವು ತನ್ನ ವಿವೇಚನಾನುಸಾರ (ಖ) ಖಂಡದ ಮೇರೆಗೆ ತೆರಿಗೆ ಅಥವಾ ಇತರ ಮೊಬಲಗಿನ ಸಂದಾಯದ ಬಗ್ಗೆ ತಾನು ಸೂಕ್ತವೆಂದು ಭಾವಿಸುವಂಥ ನಿರ್ದೇಶನಗಳನ್ನು ಕೊಡಬಹುದು.

(4) ಅಪೀಲು ನಿಯಮಿಸಿದ ರೀತಿಯಲ್ಲಿರತಕ್ಕದ್ದು ಮತ್ತು ಅದನ್ನು ನಿಯಮಿಸಿದ ರೀತಿಯಲ್ಲಿ ಸತ್ಯಾಪನೆ ಮಾಡತಕ್ಕದ್ದು.

(5) ಅಪೀಲನ್ನು ವಿಲೆ ಮಾಡುವಲ್ಲಿ ಅಪೀಲು ಪ್ರಾಧಿಕಾರವು ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶ ಕೊಟ್ಟ ತರುವಾಯ, ...

(ಕ) ನಿರ್ಧರಣೆ ಅಥವಾ ದಂಡದ ಆದೇಶ ಸಂದರ್ಭದಲ್ಲಿ.–

(i) ನಿರ್ಧರಣೆ ಅಥವಾ ದಂಡ ಅಥವಾ ಅವೆರಡನ್ನು ಸ್ಥಿರೀಕರಿಸಬಹುದು, ಕಡಿಮೆ ಮಾಡಬಹುದು, ಹೆಚ್ಚಿಸಬಹುದು ಅಥವಾ ರದ್ದುಗೊಳಿಸಬಹುದು ;

(ii) ನಿರ್ಧರಣೆಯನ್ನು ತಳ್ಳಿ ಹಾಕಬಹುದು ಮತ್ತು ನಿರ್ದೇಶಿಸಬಹುದಾದಂಥ ಇನ್ನೂ ಹೆಚ್ಚಿನ ತನಿಖೆಯ ತರುವಾಯ ಹೊಸ ನಿರ್ಧರಣೆಯನ್ನು ಮಾಡುವಂತೆ ನಿರ್ಧರಣಾ ಪ್ರಾಧಿಕಾರಿಗೆ ನಿರ್ದೇಶಿಸಬಹುದು ; ಅಥವಾ

(iii) ತಾನು ಸೂಕ್ತವೆಂದು ಭಾವಿಸುವಂಥ ಇತರ ಆದೇಶಗಳನ್ನು ಮಾಡಬಹುದು ; ಮತ್ತು

(ಖ) ಯಾವುದೇ ಇತರ ಆದೇಶದ ಸಂದರ್ಭದಲ್ಲಿ ಅಂಥ ಆದೇಶವನ್ನು ಸ್ಥಿರೀಕರಿಸಬಹುದು, ರದ್ದುಗೊಳಿಸಬಹುದು ಅಥವಾ ವ್ಯತ್ಯಸ್ತಗೊಳಿಸಬಹುದು.

(6) ಈ ಪ್ರಕರಣದ ಮೇರೆಗೆ ಅಪೀಲಿನ ಮೇಲೆ ಮಾಡಲಾದ ಪ್ರತಿಯೊಂದು ಆದೇಶವು 14 ರಿಂದ 17 ರವರೆಗಿನ ಪ್ರಕರಣಗಳ ಉಪಬಂಧಗಳಿಗೊಳಪಟ್ಟು ಅಂತಿಮವಾಗಿರತಕ್ಕದ್ದು.

**14. ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು.–** (1) ಈ ಬಗ್ಗೆ ರಾಜ್ಯ ಸರ್ಕಾರದಿಂದ ಅಧಿಕೃತನಾದ ಯಾವನೇ ಅಧಿಕಾರಿಯು ಅಥವಾ ಅಪೀಲು ಪ್ರಾಧಿಕಾರವು ಮಾಡಲಾದ ಆದೇಶವನ್ನು ಆಕ್ಷೇಪಿಸುವ ಯಾವನೇ ಇತರ ವ್ಯಕ್ತಿಯು ತನಗೆ ಆದೇಶವನ್ನು ತಿಳಿಯಪಡಿಸಿದ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗಾಗಿ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲನ್ನು ಮಾಡಬಹುದು.

(2) ಅಪೀಲುದಾರನು ಆ ಅವಧಿಯೊಳಗೆ ಅಪೀಲನ್ನು ಸಲ್ಲಿಸದೆ ಇರಲು ಸಾಕಷ್ಟು ಕಾರಣಗಳಿವೆಯೆಂದು ಅಪೀಲು ನ್ಯಾಯಾಧಿಕರಣಕ್ಕೆ ಮನದಟ್ಟಾದರೆ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿತವಾದ ಅರವತ್ತು ದಿನಗಳ ಅವಧಿಯ ತರುವಾಯ ಸಲ್ಲಿಸಲಾದ ಅಪೀಲನ್ನು ಸ್ವೀಕರಿಸಬಹುದು.

(3) 1976ರ ಕರ್ನಾಟಕ ಅಪೀಲು ನ್ಯಾಯಾಧಿಕರಣ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಅಪೀಲು ನ್ಯಾಯಾಧಿಕರಣವು ಅಪೀಲನ್ನು ನಿಯಮಿಸಲಾದ ರೀತಿಯಲ್ಲಿ ವಿಲೇ ಮಾಡಬಹುದು.

**15. ರಾಜಸ್ವಕ್ಕೆ ಬಾಧಕವಾದ ಆದೇಶಗಳನ್ನು ಕಮೀಷನರು ಪುನರೀಕ್ಷಣೆ ಮಾಡುವುದು.–** (1) ಕಮೀಷನರನು ಅಥವಾ ಈ ಬಗ್ಗೆ ಅವನಿಂದ ವಿಶೇಷವಾಗಿ ಅಧಿಕೃತನಾಗಿರುವ ಯಾವನೇ ಇತರ ಅಧಿಕಾರಿಯು ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯ ದಾಖಲೆಯನ್ನು ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಅದರಲ್ಲಿ ಯಾವನೇ ಅಧಿಕಾರಿಯು ಮಾಡಿದ ಯಾವುದೇ ಆದೇಶವು ರಾಜಸ್ವದ ಹಿತಾಸಕ್ತಿಗೆ ಬಾಧಕವಿರುವಷ್ಟರ ಮಟ್ಟಿಗೆ ತಪ್ಪಾಗಿದೆಯೆಂದು ಅವನು ಪರಿಗಣಿಸಿದರೆ ತೆರಿಗೆದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ ಮತ್ತು ತಾನು ಅವಶ್ಯವೆಂದು ಭಾವಿಸುವಂಥ ತನಿಖೆಯನ್ನು ಮಾಡಿದ ತರುವಾಯ ಅವನು ಪ್ರಕರಣದ ಸನ್ನಿವೇಶಗಳನ್ನು ಸಮರ್ಥಿಸುವ ಹಾಗೆ ನಿರ್ಧರಣೆಯನ್ನು ಹೆಚ್ಚಿಸುವ ಅಥವಾ ಮಾರ್ಪಡಿಸುವ ಅಥವಾ ನಿರ್ಧರಣೆಯನ್ನು ರದ್ದುಗೊಳಿಸುವ ಮತ್ತು ಹೊಸ ನಿರ್ಧರಣೆಯನ್ನು ನಿರ್ದೇಶಿಸುವ ಆದೇಶವನ್ನು ಒಳಗೊಂಡು ಅಂಥ ಆದೇಶವನ್ನು ಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಅಧಿಕಾರವನ್ನು ಪುನರೀಕ್ಷಿಸಬೇಕೆಂದು ಕೇಳುವ ಆದೇಶವನ್ನು ಮಾಡಿದ ದಿನಾಂಕದಿಂದ ನಾಲ್ಕು ವರ್ಷಗಳ ಅವಧಿಗಳೊಳಗಾಗಿ ಮಾತ್ರ ಚಲಾಯಿಸಬಹುದಾಗಿರತಕ್ಕದ್ದು.

**ವಿವರಣೆ.–** (2)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ಕಾಲಪರಿಮಿತಿಯನ್ನು ಲೆಕ್ಕ ಮಾಡುವಲ್ಲಿ ಯಾವ ಅವಧಿಯಲ್ಲಿ ಈ ಪ್ರಕರಣದ ಮೇರೆಗಿನ ಯಾವುದೇ ವ್ಯವಹರಣೆಯನ್ನು ಯಾವುದೇ ನ್ಯಾಯಾಲಯದ ಆದೇಶದ ಅಥವಾ ನಿರ್ಬಂಧಕಾಜ್ಞೆ ಮೂಲಕ ತಡಮಾಡಿತ್ತೋ ಆ ಅವಧಿಯನ್ನು ಬಿಟ್ಟುಬಿಡತಕ್ಕದ್ದು.

**16. ಉಚ್ಚ ನ್ಯಾಯಾಲಯಕ್ಕೆ ಅಪೀಲು.–** (1) 15ನೇ ಪ್ರಕರಣದ ಮೇರೆಗೆ ಮಾಡಲಾದ ಆದೇಶವನ್ನು ಆಕ್ಷೇಪಿಸುವ ಯಾವನೇ ತೆರಿಗೆದಾರನು ಅವನಿಗೆ ಆದೇಶವನ್ನು ತಿಳಿಯಪಡಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಉಚ್ಚ ನ್ಯಾಯಾಲಯಕ್ಕೆ ಅಪೀಲು ಮಾಡಬಹುದು ;

ಪರಂತು, ಆ ಅವಧಿಯೊಳಗೆ ಅಪೀಲನ್ನು ಸಲ್ಲಿಸದೆ ಇರಲು ತೆರಿಗೆದಾರನಿಗೆ ಸಾಕಷ್ಟು ಕಾರಣವಿದೆಯೆಂದು ಉಚ್ಚ ನ್ಯಾಯಾಲಯಕ್ಕೆ ಮನದಟ್ಟಾದರೆ ಹಿಂದೆ ಹೇಳಿದ ಅರವತ್ತು ದಿನಗಳ ಅವಧಿಯ ತರುವಾಯ ಸಲ್ಲಿಸಲಾದ ಅಪೀಲನ್ನು ಸ್ವೀಕರಿಸಬಹುದು.

(2) ಅಪೀಲು ನಿಯಮಿಸಲಾದ ನಮೂನೆಯಲ್ಲಿದ್ದು ನಿಯಮಿಸಲಾದ ರೀತಿಯಲ್ಲಿ ಅದನ್ನು ಸತ್ಯಾಪನೆ ಮಾಡತಕ್ಕದ್ದು ಮತ್ತು ಒಂದು ನೂರು ರೂಪಾಯಿ ಫೀಜಿನೊಂದಿಗಿರತಕ್ಕದ್ದು.

(3) ಉಚ್ಚ ನ್ಯಾಯಾಲಯವು ಅಪೀಲಿನ ಎರಡೂ ಪಕ್ಷದವರಿಗೂ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶ ಕೊಟ್ಟ ತರುವಾಯ ಅದರ ಮೇಲೆ ತಾನು ಸೂಕ್ತವೆಂದು ಯೋಚಿಸುವಂಥ ಆದೇಶವನ್ನು ಮಾಡಬಹುದು.

**17. ತಪ್ಪುಗಳನ್ನು ಸರಿಪಡಿಸುವಿಕೆ.–** (1) ದಾಖಲೆಯಿಂದ ಸ್ಪಷ್ಟವಾಗಿ ಕಂಡು ಬರುವ ಯಾವುದೇ ತಪ್ಪನ್ನು ಸರಿಪಡಿಸುವ ಉದ್ದೇಶದಿಂದ ನಿರ್ಧರಣಾ ಪ್ರಾಧಿಕಾರಿಯು ಅಪೀಲು ಪ್ರಾಧಿಕಾರ ಅಥವಾ ಪುನರೀಕ್ಷಣಾ ಪ್ರಾಧಿಕಾರವು ತಾನು ಮಾಡಿದ ಆದೇಶದ ದಿನಾಂಕದಿಂದ ಐದು ವರ್ಷಗಳೊಳಗೆ ಯಾವುದೇ ಕಾಲದಲ್ಲಿ ಅಂಥ ಆದೇಶವನ್ನು ತಿದ್ದುಪಡಿ ಮಾಡಬಹುದು.

ಪರಂತು, ಒಂದು ನಿರ್ಧರಣೆಯನ್ನು ಹೆಚ್ಚಿಸುವ ಅಥವಾ ಅನ್ಯಥಾ ತೆರಿಗೆದಾರನ ಹೊಣೆಯನ್ನು ಹೆಚ್ಚಿಸುವ ಪರಿಣಾಮವಿರುವ ತಿದ್ದುಪಡಿಯನ್ನು ಸಂದರ್ಭಾನುಸಾರ ನಿರ್ಧರಣಾ ಪ್ರಾಧಿಕಾರಿ, ಅಪೀಲು ಪ್ರಾಧಿಕಾರ ಅಥವಾ ಪುನರೀಕ್ಷಿಸುವ ಪ್ರಾಧಿಕಾರವು ಹಾಗೆ ಮಾಡುವ ತನ್ನ ಆಶಯದ ಬಗ್ಗೆ ತೆರಿಗೆದಾರನಿಗೆ ನೋಟೀಸನ್ನು ಮತ್ತು ತೆರಿಗೆದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶ ಕೊಟ್ಟ ಹೊರತು ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿತವಾದ ಆದೇಶಕ್ಕೆ ಸಂಬಂಧಿಸಿದ ಅಪೀಲು ಅಥವಾ ಪುನರೀಕ್ಷಣೆಯ ಮೂಲಕ ಯಾವುದೇ ವ್ಯವಹರಣೆಗಳಲ್ಲಿ ಆದೇಶವನ್ನು ಪರಿಗಣಿಸಿದಲ್ಲಿ ಮತ್ತು ತೀರ್ಮಾನಿಸಿದಲ್ಲಿ ಅಂಥ ಆದೇಶವನ್ನು ಮಾಡುವ ಪ್ರಾಧಿಕಾರವು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ ಪರಿಗಣಿಸಲಾದ ಮತ್ತು ತೀರ್ಮಾನಿಸಲಾದ ವಿಷಯದ ಹೊರತು ಯಾವುದೇ ವಿಷಯಕ್ಕೆ ಸಂಬಂಧಿಸಿ ಆ ಉಪ ಪ್ರಕರಣದ ಮೇರೆಗೆ ಆದೇಶವನ್ನು ತಿದ್ದುಪಡಿ ಮಾಡಬಹುದು.

(3) (1)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಆದೇಶವು ಯಾವುದರ ಮೇರೆಗೆ ಮೂಲ ಆದೇಶದಲ್ಲಿ ತಪ್ಪನ್ನು ಸರಿಪಡಿಸಿ ಮಾಡಲಾಗಿದೆಯೋ ಅದೇ ಕಾನೂನಿನ ಉಪಬಂಧಗಳ ಮೇರೆಗೆ ಆದೇಶವನ್ನು ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

## ಅಧ್ಯಾಯ – VI

### ಸಂಕೀರ್ಣ

**18. ಲೆಕ್ಕಪತ್ರಗಳನ್ನು ಹಾಜರುಪಡಿಸಲು ಆದೇಶ ಮಾಡಲು ಅಧಿಕಾರ ಮತ್ತು ಪ್ರವೇಶ, ಪರೀಕ್ಷೆ ಮತ್ತು ಅಭಿಗ್ರಹಣದ ಅಧಿಕಾರ :–** (1) ಈ ಬಗ್ಗೆ ರಾಜ್ಯ ಸರ್ಕಾರದಿಂದ ಅಧಿಕೃತವಾದ ಯಾವನೇ ಅಧಿಕಾರಿಯು ಈ ಅಧಿನಿಯಮದ ಉದ್ದೇಶಕ್ಕಾಗಿ ಲೆಕ್ಕಪತ್ರಗಳನ್ನು ಮತ್ತು ಇತರ ಯಾವುದೇ ದಸ್ತಾವೇಜುಗಳನ್ನು ತನ್ನ ಮುಂದೆ ಹಾಜರುಪಡಿಸುವಂತೆ, ಯಾವನೇ ವ್ಯಾಪಾರಿಯನ್ನು ಮತ್ತು ಇತರ ಯಾವುದೇ ದಸ್ತಾವೇಜುಗಳನ್ನು ತನ್ನ ಮುಂದೆ ಹಾಜರುಪಡಿಸುವಂತೆ, ಯಾವನೇ ವ್ಯಾಪಾರಿಯನ್ನು ಮತ್ತು ಅನುಸೂಚಿತ ಸರಕುಗಳ ದಾಸ್ತಾನು, ಖರೀದಿ, ಮಾರಾಟ ಮತ್ತು ಬಡವಾಡೆಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿಯನ್ನು ವ್ಯಾಪಾರಿಯು ಒದಗಿಸುವಂತೆ ಮತ್ತು ಅವನ ವ್ಯಾಪಾರಕ್ಕೆ ಸಂಬಂಧಪಟ್ಟ ಯಾವುದೇ ಮಾಹಿತಿಯನ್ನು ಒದಗಿಸುವಂತೆ ಅಗತ್ಯಪಡಿಸಬಹುದು.

(2) ಯಾವುದೇ ವ್ಯಾಪಾರಿಯು ಈ ಅಧಿನಿಯಮದ ಮೇರೆಗೆ ತನ್ನಿಂದ ಬಾಕಿಯಿರುವ ಯಾವುದೇ ತೆರಿಗೆ, ಫೀಜು ಅಥವಾ ಇತರ ಮೊಬಲಗನ್ನು ಸಂದಾಯ ಮಾಡುವುದರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುವನೆಂದು ಅಂಥ ಯಾವನೇ ಅಧಿಕಾರಿಯು ಸಂಶಯಪಡಲು ಕಾರಣವಿದ್ದಲ್ಲಿ ಅವನು ಬರಹದಲ್ಲಿ ಕಾರಣಗಳನ್ನು ದಾಖಲ್ಮಾಡಿಸಿ ತಾನು ಅವಶ್ಯವೆಂದು ಪರಿಗಣಿಸಬಹುದಾದ ವ್ಯಾಪಾರಿಯ ಲೆಕ್ಕಪತ್ರಗಳನ್ನು ರಿಜಿಸ್ಟ್ರರುಗಳನ್ನು ದಾಖಲೆಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಅಭಿಗ್ರಹಿಸಬಹುದು ಮತ್ತು ಆ ಬಗ್ಗೆ ವ್ಯಾಪಾರಿಗೆ ರಸೀದಿಯನ್ನು ಕೊಡತಕ್ಕದ್ದು ಹಾಗೆ ಅಭಿಗ್ರಹಿಸಲಾದ ಲೆಕ್ಕಪತ್ರಗಳನ್ನು ರಿಜಿಸ್ಟ್ರರುಗಳನ್ನು ದಾಖಲೆ ಮತ್ತು ದಸ್ತಾವೇಜುಗಳನ್ನು ಅವುಗಳ ಪರೀಕ್ಷೆಗೆ ಅಗತ್ಯವಿರಬಹುದಾದಷ್ಟರವರೆಗೆ ಮಾತ್ರ ಅವುಗಳನ್ನು ಮತ್ತು ಈ ಅಧಿನಿಯಮದ ಮೇರೆಗೆ ಯಾವುದೇ ವಿಚಾರಣೆ ಅಥವಾ ವ್ಯವಹರಣೆಗಾಗಿ ಅಂಥ ಅಧಿಕಾರಿಯು ತಡೆಹಿಡಿದಿಟ್ಟುಕೊಳ್ಳತಕ್ಕದ್ದು.

ಪರಂತು, ಅಂಥ ಲೆಕ್ಕಪತ್ರಗಳ ರಿಜಿಸ್ಟ್ರರುಗಳನ್ನು ದಾಖಲೆ ಮತ್ತು ದಸ್ತಾವೇಜುಗಳನ್ನು ಮೇಲಾಧಿಕಾರಿಯ ಅನುಮತಿಯಿದ್ದ ಹೊರತು ಒಂದು ಸಲಕ್ಕೆ ಅರವತ್ತು ದಿನಗಳಿಗಿಂತ ಹೆಚ್ಚಿಗೆ ತಡೆಹಿಡಿದಿಟ್ಟುಕೊಳ್ಳತಕ್ಕದ್ದಲ್ಲ.

(3) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಕೈಗೊಳ್ಳಬೇಕಾದ ಕ್ರಮದ ಉದ್ದೇಶಕ್ಕಾಗಿ ವಿವಿಧ ವರ್ಗಗಳ ಅಧಿಕಾರಿಗಳಿಗೆ ಅಧಿಕಾರ ನೀಡಲು ರಾಜ್ಯ ಸರ್ಕಾರಕ್ಕೆ ಅವಕಾಶವಿರತಕ್ಕದ್ದು.

**"18ಕ. ಈ ಅಧಿನಿಯಮದ ಉದ್ದೇಶಗಳಿಗಾಗಿ ಮಾರಾಟ ತೆರಿಗೆ ಚೆಕ್‌ಪೋಸ್ಟ್‌ಗಳ ಮತ್ತು ಸುಂಕದ ಕಟ್ಟೆಗಳ ಮನ್ನಣೆ:–** ಈ ಅಧಿನಿಯಮದ ಮೇರೆಗೆ ತೆರಿಗೆಯಿಂದ ತಪ್ಪಿಸಿಕೊಳ್ಳುವುದನ್ನು ಪ್ರತಿಬಂಧಿಸುವ ಅಥವಾ ತಡೆಯುವ ದೃಷ್ಟಿಯಿಂದ, 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ (ಕರ್ನಾಟಕ ಅಧಿನಿಯಮ 1957ರ 25) ಉಪಬಂಧಗಳ ಮೇರೆಗೆ (ಇಲ್ಲಿ ಇನ್ನು ಮುಂದೆ "ಮಾರಾಟ ತೆರಿಗೆ ಅಧಿನಿಯಮ"ವೆಂದು ಉಲ್ಲೇಖಿಸಲಾಗಿದೆ) ಸ್ಥಾಪಿಸಿದ ಅಥವಾ ನಿರ್ಮಿಸಿದ, ಸಂದರ್ಭಾನುಸಾರ ಚೆಕ್

ಪೋಸ್ಟ್‌ಗಳು ಅಥವಾ ಸುಂಕದ ಕಟ್ಟೆಗಳು ಅಥವಾ ಅವೆರಡನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಮನ್ನಣೆ ಮಾಡತಕ್ಕದ್ದು.

ಯಾವುದೇ ಅನುಸೂಚಿತ ಸರಕುಗಳನ್ನು ಸಾಗಣೆ ಮಾಡುತ್ತಿರುವ ಸರಕುಗಳ ವಾಹನಗದ ಪ್ರಭಾರದಲ್ಲಿರುವ ಒಡೆಯ ಅಥವಾ ವ್ಯಕ್ತಿಯು, ಮಾರಾಟ ತೆರಿಗೆ ಅಧಿನಿಯಮದ 28ಕ ಪ್ರಕರಣದ (2)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ನಿಯಮಿಸಲಾದ ದಸ್ತಾವೇಜುಗಳನ್ನು ತನ್ನೊಂದಿಗೆ ಒಯ್ಯತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಸದರಿ ಪ್ರಕರಣದಲ್ಲಿ ನಿಯಮಿಸಲಾದ ರೀತಿಯಲ್ಲಿ ಮತ್ತು ಅಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು ಮತ್ತು ಅವನಿಗೆ ಕೊಡತಕ್ಕದ್ದು.

(3) ಮಾರಾಟ ತೆರಿಗೆ ಅಧಿನಿಯಮದ 28ಕ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಉಲ್ಲೇಖಿತನಾದ ಅಧಿಕಾರಿಯು ಸದರಿ ಉಪಪ್ರಕರಣದಲ್ಲಿ ನಮೂದಿಸಿದ ಬಗೆಯ ಪ್ರಕರಣಗಳಲ್ಲಿ ಮತ್ತು ಸನ್ನಿವೇಶಗಳಲ್ಲಿ ಸಾರಿಗೆಯಲ್ಲಿರುವ ಅನುಸೂಚಿತ ಸರಕುಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದ ತೆರಿಗೆಯ ಮೊಬಲಗಿನ ಎರಡರಷ್ಟಕ್ಕೆ ಮೀರದ ದಂಡವನ್ನು ವಿಧಿಸಬಹುದು.

(4) ದಂಡದ ವಸೂಲಿ ಮತ್ತು ಅಪೀಲುಗಳಿಗೆ ಸಂಬಂಧಪಟ್ಟಂತೆ, ಮಾರಾಟ ತೆರಿಗೆ ಅಧಿನಿಯಮದ 28ಕ ಪ್ರಕರಣದ ಉಪಬಂಧಗಳು ಈ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ವಿಧಿಸಬಹುದಾದ ದಂಡಕ್ಕೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

**19. ರವಾನಿಸುವ ಏಜೆನ್ಸಿ, ಇತ್ಯಾದಿ ವಿವರ ಪಟ್ಟಿಕೆಗಳನ್ನು ಒಪ್ಪಿಸುವುದು :–** ರಾಜ್ಯದಲ್ಲಿನ ಖಾಲಿ ಮಾಡುವ ಅಥವಾ ರವಾನಿಸುವ ಪ್ರತಿಯೊಂದು ಗೃಹವೂ ಅಥವಾ ಏಜೆನ್ಸಿಯು ಸಾಗಣೆ ಮಾಡುವ ಏಜೆನ್ಸಿ, ಷಿಪ್ಪಿಂಗ್ ಏಜೆನ್ಸಿ, ಷಿಪ್ಪಿಂಗ್ ಹೊರ ಏಜೆನ್ಸಿ ಅಥವಾ ಸ್ಟೀಮರ್ ಏಜೆನ್ಸಿಯು ಸಂಬಂಧಪಟ್ಟ ಸ್ಥಳೀಯ ಪ್ರದೇಶಗಳಿಗೆ ಖಾಲಿ ಮಾಡಿದ, ರವಾನಿಸಲಾದ ಸಾಗಣೆ ಮಾಡಲದ ಅಥವಾ ಹಡಗಿನಲ್ಲಿ ಕಳಿಸಿದಂಥ ಎಲ್ಲ ಅನುಸೂಚಿತ ಸರಕುಗಳ ವಿವರಪಟ್ಟಿಕೆಯನ್ನು ನಿಯಮಿಸಬಹುದಾದ ಪ್ರದೇಶದ ನಿರ್ಧರಣಾ ಪ್ರಾಧಿಕಾರಕ್ಕೆ ಒಪ್ಪಿಸತಕ್ಕದ್ದು. ಸಂಬಂಧಪಟ್ಟ ನಿರ್ಧರಣಾ ಪ್ರಾಧಿಕಾರಿಯು ಒಪ್ಪಿಸಲಾದ ವಿವರ ಪಟ್ಟಿಕೆಯು ಸರಿಯಾಗಿದೆಯೆಂಬುದನ್ನು ನೋಡುವ ದೃಷ್ಟಿಯಿಂದ ಅಂಥ ಏಜೆನ್ಸಿಯ ಸ್ವಾಧೀನದಲ್ಲಿರುವ ಲೆಕ್ಕಪತ್ರಗಳ ಪುಸ್ತಕಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ತರಿಸಿಕೊಳ್ಳಲು ಮತ್ತು ಪರೀಕ್ಷಿಸಲು ಅಧಿಕಾರ ಹೊಂದಿರತಕ್ಕದ್ದು.

**20. ವಾಹನ ಮತ್ತು ದೋಣಿಗಳ ಒಡೆಯರು ಮುಂತಾದವರಿಂದ ಕೆಲವು ದಾಖಲೆಗಳ ಒಪ್ಪಿಸುವಿಕೆ:–** ಅನುಸೂಚಿತ ಸರಕುಗಳ ವಾಹನ ಅಥವಾ ದೋಣಿಗಳ ಪ್ರಭಾರದಲ್ಲಿರುವ ಒಡೆಯ ಅಥವಾ ಇತರ ವ್ಯಕ್ತಿಯು ಅಂಥ ವಾಹನ ಅಥವಾ ದೋಣಿಗಳಲ್ಲಿ ಸಾಗಿಸಲಾದ ಅನುಸೂಚಿತ ಸರಕುಗಳ ಬಗ್ಗೆ ಅನುಸೂಚಿತ ಸರಕುಗಳನ್ನು ಯಾವ ಸ್ಥಳೀಯ ಪ್ರದೇಶದಲ್ಲಿ ವಶಾವಣೆ ಮಾಡಲಾಗಿದೆಯೋ ಅಂಥ ಸ್ಥಳೀಯ ಪ್ರದೇಶದೊಳಗೆ ಅಧಿಕಾರ ವ್ಯಾಪ್ತಿಯಲ್ಲಿರುವ ನಿರ್ಧರಣಾ ಪ್ರಾಧಿಕಾರಿಗೆ ಅವುಗಳ ವಿವರಗಳನ್ನು ನಿಯಮಿಸಬಹುದಾದಂಥ ಕಾಲದಲ್ಲಿ ಮತ್ತು ರೀತಿಯಲ್ಲಿ ಒಪ್ಪಿಸತಕ್ಕದ್ದು.

**21. ಅಪರಾಧಗಳು ಮತ್ತು ದಂಡನೆಗಳು:–** (1) ಯಾವನೇ ವ್ಯಕ್ತಿಯು,–

(ಕ) ಅನುಸೂಚಿತ ಸರಕುಗಳ ವ್ಯಾಪಾರಿಯಾಗಿದ್ದು ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅದರ ಮೇರೆಗೆ ರಚಿತವಾದ ನಿಯಮಗಳ ಮೂಲಕ ಅಗತ್ಯಪಡಿಸಿದಂತೆ ವಿವರ ಪಟ್ಟಿಕೆಯನ್ನು ಸಲ್ಲಿಸಲು ತಪ್ಪಿದರೆ; ಅಥವಾ

(ಖ) ಈ ಅಧಿನಿಯಮದ ಮೇರೆಗೆ ತನ್ನನ್ನು ನೋಂದಾಯಿಸಿಕೊಳ್ಳಬೇಕಾದ ವ್ಯಕ್ತಿಯು ಹಾಗೆ ತನ್ನನ್ನು ನೋಂದಾಯಿಸಿಕೊಳ್ಳದಿದ್ದರೆ; ಅಥವಾ

(ಗ) ಅವಕಾಶ ಮಾಡಿಕೊಟ್ಟ ಕಾಲದೊಳಗೆ ಈ ಅಧಿನಿಯಮದ ಮೇರೆಗೆ ಅವನ ಬಗ್ಗೆ ಅನಿರ್ಧರಿಸಲಾದ ಯಾವುದೇ ತೆರಿಗೆಯನ್ನು ಅಥವಾ ಅವನ ಮೇಲೆ ವಿಧಿಸಿದ ಯಾವುದೇ ದಂಡವನ್ನು ಸಂದಾಯ ಮಾಡಲು ತಪ್ಪಿದರೆ ; ಅಥವಾ

(ಘ) ನಿಜವಾದ ಮತ್ತು ಪೂರ್ಣ ಲೆಕ್ಕಪತ್ರಗಳನ್ನು ಇಡಲು ತಪ್ಪಿದರೆ ; ಅಥವಾ

(ಙ) 6ನೇ ಪ್ರಕರಣದ ಮೇರೆಗೆ ಹೊರಡಿಸಿದ ನೋಟೀಸನ್ನು ಪಾಲಿಸಲು ತಪ್ಪಿದರೆ ; ಅಥವಾ

(ಚ) 7ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ವಿವರಣ ಪತ್ರವನ್ನು ಸಲ್ಲಿಸಲು ತಪ್ಪಿದರೆ ;

ಮ್ಯಾಜಿಸ್ಟ್ರೇಟರಿಂದ ಅಪರಾಧವು ನಿರ್ಣಯವಾದ ಮೇಲೆ ಎರಡು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ದಂಡಕ್ಕೆ ಗುರಿಯಾಗತಕ್ಕದ್ದು.

(2) ಯಾವನೇ ವ್ಯಕ್ತಿಯು,–

(ಕ) ನಿಜವಲ್ಲದ ವಿವರ ಪಟ್ಟಿಕೆಯನ್ನು ಉದ್ದೇಶಪೂರ್ವಕವಾಗಿ ಒಪ್ಪಿಸಿದಲ್ಲಿ ಅಥವಾ ಈ ಅಧಿನಿಯಮದ ಮೇರೆಗೆ ಈಗಾಗಲೇ ತೆರಿಗೆದಾರನಾಗಿರದಿದ್ದು ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅದರ ಮೇರೆಗೆ ರಚಿತವಾದ ನಿಯಮಗಳ ಮೂಲಕ ಅಗತ್ಯಪಡಿಸಿದಂತೆ ವಿವರ ಪಟ್ಟಿಕೆ ಒಪ್ಪಿಸಲು ತಪ್ಪಿದರೆ ; ಅಥವಾ

(ಖ) 7ನೇ ಪ್ರಕರಣದ ಮೇರೆಗೆ ಉದ್ದೇಶಪೂರ್ವಕವಾಗಿ ನಿಜವಲ್ಲದ ವಿವರ ಪತ್ರವನ್ನು ಒಪ್ಪಿಸಿದರೆ ;

(ಗ) ಈ ಅಧಿನಿಯಮದ ಮೇರೆಗೆ ಅವನ ಬಗ್ಗೆ ನಿರ್ಧರಿಸಲಾದ ಯಾವುದೇ ತೆರಿಗೆ ಅಥವಾ ಅವನಿಂದ ಬಾಕಿಯಿರುವ ಇತರ ಮೊಬಲಗನ್ನು ಸಂದಾಯ ಮಾಡಲು ಮೋಸದಿಂದ ತಪ್ಪಿಸಿಕೊಂಡರೆ ; ಅಥವಾ

(ಘ) ಈ ಅಧಿನಿಯಮದ ಯಾವುದೇ ಉಪಬಂಧ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳನ್ನು ಉಲ್ಲಂಘಿಸಿ ಉದ್ದೇಶಪೂರ್ವಕವಾಗಿ ಕಾರ್ಯ ನಡೆಸಿದರೆ, ಅಪರಾಧವು ನಿರ್ಣಯವಾದ

ಮೇಲೆ, ಅವನಿಂದ ಬಾಕಿಯಿರಬಹುದಾದ ಯಾವುದೇ ತೆರಿಗೆಯ ವಸೂಲಿಯ ಜೊತೆಗೆ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ ಅಥವಾ ನಾಲ್ಕು ಸಾವಿರ ರೂಪಾಯಿಗೆ ಮೀರದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಆ ಅಪರಾಧವು ಮುಂದುವರಿಯುತ್ತಿರುವ ಅಪರಾಧವಾದಲ್ಲಿ ಆ ಅಪರಾಧವು ಮುಂದುವರಿಯುವ ಅವಧಿಯಲ್ಲಿ ಪ್ರತಿದಿನಕ್ಕೆ ಒಂದು ನೂರು ರೂಪಾಯಿಗೆ ಮೀರದ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದು.

**22. ಅಪರಾಧಗಳ ಸಂಜ್ಞೇಯತೆ:–** (1) ಕಮೀಷನರ್‌ನ ಪೂರ್ವ ಮಂಜೂರಾತಿ ಇದ್ದ ಹೊರತು, ಯಾವುದೇ ನ್ಯಾಯಾಲಯವು 21ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(2) 1973ರ ದಂಡ ಪ್ರಕ್ರಿಯಾ ಸಂಹಿತೆಯಲ್ಲಿ (1974ರ ಕೇಂದ್ರ ಅಧಿನಿಯಮ 2) ಏನೇ ಅಡಕವಾಗಿದ್ದಾಗ್ಯೂ, 21ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಎಲ್ಲ ಅಪರಾಧಗಳು ಸಂಜ್ಞೇಯ ಮತ್ತು ಜಾಮೀನಿಯವಾಗಿರತಕ್ಕದ್ದು.

**23. ಅಪರಾಧಗಳ ರಾಜಿ:–** ನಿಯಮಿಸಲಾದ ಪ್ರಾಧಿಕಾರಿಯು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧವನ್ನು ಮಾಡಿದ, ಮಾಡಿದ್ದಾನೆಂದು ಯುಕ್ತನಾಗಿ ಶಂಕಿತನಾದ ಯಾವನೇ ವ್ಯಕ್ತಿಯಿಂದ ಅಂಥ ಅಪರಾಧದ ರಾಜಿಯ ರೂಪವಾಗಿ ;

(ಕ) ಈ ಅಧಿನಿಯಮದ ಮೇರೆಗೆ ವಸೂಲ್ಮಾಡಬಹುದಾದ ಯಾವುದೇ ತೆರಿಗೆ ಅಥವಾ ಇತರ ಮೊಬಲಗನ್ನು ಸಂದಾಯ ಮಾಡಲು ತಪ್ಪುವ ಅಥವಾ ತಪ್ಪಿಸಿಕೊಳ್ಳುವುದನ್ನು ಒಳಗೊಂಡ ಅಪರಾಧವಾಗಿರುವಲ್ಲಿ, ಹಾಗೆ ವಸೂಲು ಮಾಡಬಹುದಾದ ತೆರಿಗೆ ಅಥವಾ ಮೊಬಲಗಿನ ಜೊತೆಗೆ ಒಂದು ಸಾವಿರ ರೂಪಾಯಿಗೆ ಮೀರದ ಅಥವಾ ವಸೂಲ್ಮಾಡಬಹುದಾದ ತೆರಿಗೆ ಅಥವಾ ಮೊಬಲಗಿನ ಎರಡರಷ್ಟು ಹಣ ಅವುಗಳಲ್ಲಿ ಯಾವುದು ಹೆಚ್ಚೋ ಆ ಮೊತ್ತವನ್ನು ; ಮತ್ತು

(ಖ) ಇತರ ಪ್ರಕರಣಗಳಲ್ಲಿ ಒಂದು ಸಾವಿರ ರೂಪಾಯಿಗೆ ಮೀರದ ಹಣದ ಮೊತ್ತವನ್ನು

– ಅಂಗೀಕರಿಸಬಹುದು.

**24. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಮಾಡುವ ವ್ಯಕ್ತಿಯ ಒಂದು ಕಂಪನಿಯಾಗಿದ್ದರೆ, ಅಪರಾಧ ನಡೆದ ಕಾಲದಲ್ಲಿ ಆ ಕಂಪನಿಯ ಆಡಳಿತವನ್ನು ಹೊಂದಿದ್ದ ಮತ್ತು ಅದರ ವ್ಯವಹಾರಗಳನ್ನು ನಡೆಸುವ ಬಗ್ಗೆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅವರ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು;

ಪರಂತು, ಈ ಉಪಪ್ರಕರಣದಲ್ಲಿ ಅಡಕವಾಗಿರುವುದು ಯವುದೂ ಅಂಥ ಅಪರಾಧ ತನ್ನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅದನ್ನು ಪ್ರತಿಬಂಧಿಸಲು ತಾನು ಯುಕ್ತ

ಜಾಗರೂಕತೆಯನ್ನು ವಹಿಸಿದನೆಂದು ಅಂಥ ಯಾವನೇ ವ್ಯಕ್ತಿಯು ರುಜುವಾತು ಪಡಿಸಿದರೆ, ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಅಡುವಾಗಿದ್ದಾಗ್ಯೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವನೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದರೆ ಅಥವಾ ಆ ಅಪರಾಧದ ನಡೆಯುವಿಕೆಯನ್ನು ಅವರ ಯಾವುದೇ ನಿರ್ಲಕ್ಷತೆಗೆ ಆರೋಪಿಸಬಹುದಾದರೆ ಅಂಥ ನಿರ್ದೇಶಕ, ವ್ಯವಸ್ಥಾಪಕ, ವ್ಯವಸ್ಥಾಪಕ ಏಜೆಂಟ್, ಇತರ ಅಧಿಕಾರಿಗಳನ್ನು ಸಹ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ:–

(ಕ) **'ಕಂಪನಿ'** ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಒಂದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ ; ಮತ್ತು

(ಖ) ಒಂದು ಫರ್ಮಿಗೆ ಸಂಬಂಧಪಟ್ಟಂತೆ, **"ನಿರ್ದೇಶಕ"** ಎಂದರೆ ಫರ್ಮಿನ ಪಾಲುದಾರ.

**25. ಕರ ನಿರ್ಧರಣೆ, ಮುಂತಾದವುದನ್ನು ಪ್ರಾಸಿಕ್ಯೂಷನ್‌ನಲ್ಲಿ ಪ್ರಶ್ನಿಸತಕ್ಕದ್ದಲ್ಲ.–** ಈ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ತೆರಿಗೆಯ ನಿರ್ಧರಣೆಯನ್ನು ಅಥವಾ ಯಾವುದೇ ಫೀಸು ಅಥವಾ ಇತರ ಮೊಬಲಗನ್ನು ವಿಧಿಸುವಿಕೆಯ ಸಿಂಧುತ್ವವನ್ನು ಅಥವಾ ನಿರ್ಧರಿಸಲಾದ ಅಥವಾ ವಿಧಿಸಲಾದ ಯಾವುದೇ ತೆರಿಗೆ, ಫೀಸು ಅಥವಾ ಇತರ ಮೊಬಲಗನ್ನು ಸಂದಾಯ ಮಾಡಲು ಯಾವನೇ ವ್ಯಕ್ತಿಯ ಹೊಣೆಗಾರಿಕೆಯನ್ನು ಯಾವುದೇ ಕ್ರಿಮಿನಲ್ ನ್ಯಾಯಾಲಯದಲ್ಲಿನ ಯಾವುದೇ ಪ್ರಾಸಿಕ್ಯೂಷನ್‌ನಲ್ಲಿ ಅಥವಾ ಈ ಅಧಿನಿಯಮದ ಮೇರೆಗೆಯಾಗಲಿ ಅಥವಾ ಅನ್ಯಥಾ ಆಗಲಿ ಇತರ ವ್ಯವಹರಣೆಯನ್ನು ಪ್ರಶ್ನಿಸತಕ್ಕದ್ದಲ್ಲ.

**26. ಕೆಲವು ವ್ಯವಹರಣೆಗಳ ಪ್ರತಿಷೇಧ:–** (1) ಈ ಅಧಿನಿಯಮದ ಮೇರೆಗೆ ಮಾಡಿದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕಾರ್ಯಕ್ಕಾಗಿ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ವ್ಯವಹರಣೆಯನ್ನು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ ಈ ರಾಜ್ಯ ಸರ್ಕಾರದ ಯಾವನೇ ಅಧಿಕಾರಿ ಅಥವಾ ನೌಕರನ ವಿರುದ್ಧ ಹೂಡತಕ್ಕದ್ದಲ್ಲ.

(2) ರಾಜ್ಯ ಸರ್ಕಾರದ ಯಾವನೇ ಅಧಿಕಾರಿಯು ಅಥವಾ ನೌಕರನು, ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಯಲ್ಲಿ ಅಂಥ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ, ಆ ಕಾರ್ಯವನ್ನು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ವಿಧಿಸಿದ ಕರ್ತವ್ಯಗಳನ್ನು ಕಾರ್ಯಗತಗೊಳಿಸುವಲ್ಲಿ ಅಥವಾ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಸದ್ಭಾವನೆಯಿಂದ ಮಾಡಿದ್ದರೆ, ಅದಕ್ಕೆ ಹೊಣೆಗಾರನಾಗತಕ್ಕದ್ದಲ್ಲ.

**27. ಈ ಅಧಿನಿಯಮದಲ್ಲಿ ಉಪಬಂಧಿಸಿದ್ದಂತೆ ಹೊರತು ನ್ಯಾಯಾಲಯಗಳು ಕರ ನಿರ್ಧರಣೆಯನ್ನು ತಳ್ಳಿಹಾಕತಕ್ಕದ್ದಲ್ಲ ಅಥವಾ ಮಾರ್ಪಾಟು ಮಾಡತಕ್ಕದ್ದಲ್ಲ:–** ಈ ಅಧಿನಿಯಮದಲ್ಲಿ ವ್ಯಕ್ತವಾಗಿ ಉಪಬಂಧಿಸಿದ್ದಂತೆ ಹೊರತು, ಈ ಅಧಿನಿಯಮದ ಮೇರೆಗಿನ ಯಾವುದೇ ಕರ ನಿರ್ಧರಣೆಯನ್ನು ತಳ್ಳಿಹಾಕಲು ಅಥವಾ ಮಾರ್ಪಾಟು ಮಾಡಲು ಯಾವುದೇ ದಾವೆ ಅಥವಾ ಇತರ ವ್ಯವಹರಣೆಯನ್ನು ಯಾವುದೇ ನ್ಯಾಯಾಲಯದಲ್ಲಿ ಹೂಡತಕ್ಕದ್ದಲ್ಲ.

**28. ವಿನಾಯಿತಿಗಳು.–** ಅನುಸೂಚಿತ ಸರಕುಗಳ ವ್ಯಾಪಾರಿಗಳಲ್ಲದ ವ್ಯಕ್ತಿಗಳಿಗೆ ಈ ಅಧಿನಿಯಮದಲ್ಲಿರುವುದಾವುದೂ ಅನ್ವಯಿಸತಕ್ಕದ್ದಲ್ಲ.

**29. ತೆರಿಗೆಯ ಉತ್ಪನ್ನಗಳ ವಹಿಸಿಕೊಡುವಿಕೆ.–** ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಪ್ರತಿವರ್ಷ ಪ್ರತಿಯೊಂದು ಸ್ಥಳೀಯ ಪ್ರಾಧಿಕಾರಕ್ಕೆ ಈ ಅಧಿನಿಯಮದ ಮೇರೆಗೆ ಸಂಗ್ರಹಿಸಲಾದ ತೆರಿಗೆಯಿಂದ ಸರ್ಕಾರವು ನಿರ್ಧರಿಸಬಹುದಾದಂಥ ಮೊತ್ತವನ್ನು ಸಂದಾಯ ಮಾಡತಕ್ಕದ್ದು.

**30. ನಿಯಮ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಪೂರ್ವ ಪ್ರಕಟಣೆಯ ಷರತ್ತಿಗೆ ಒಳಪಟ್ಟು, ಈ ಅಧಿನಿಯಮದ ಉದ್ದೇಶವನ್ನೂ ಕಾರ್ಯಗತಗೊಳಿಸಲು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು ;

ಪರಂತು, ಈ ಅಧಿನಿಯಮದ ಪ್ರಾರಂಭದ ತರುವಾಯ ಮೊದಲಬಾರಿಗೆ ನಿಯಮಗಳನ್ನು ಮಾಡುವಲ್ಲಿ ಪೂರ್ವ ಪ್ರಕಟಣೆಯ ಅವಶ್ಯಕತೆಯಿರುವುದಿಲ್ಲ.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು,–

(ಕ) ಈ ಅಧಿನಿಯಮದ ಮೂಲಕ ನಿಯಮಿಸಬೇಕೆಂದು ವ್ಯಕ್ತವಾಗಿ ಅಗತ್ಯಪಡಿಸಲಾದ ಅಥವಾ ಅವಕಾಶ ಮಾಡಲಾದ ಎಲ್ಲ ವಿಷಯಗಳು ;

(ಖ) ಮುಂದುವರಿಸದೆ ಇರುವ ಅಥವಾ ಒಡೆತನವು ಬದಲಾವಣೆಯಾಗಿರುವ ವ್ಯವಹಾರಕ್ಕೆ ಸಂಬಂಧಿಸಿದಂತೆ ತೆರಿಗೆಯ ನಿರ್ಧರಣೆ ;

(ಗ) ಅಪ್ರಾಪ್ತ ವಯಸ್ಕರು ಅಥವಾ ಇತರ ಅಸಮರ್ಥಗೊಂಡ ವ್ಯಕ್ತಿಗಳು ಅಥವಾ ಕರ್ನಾಟಕ ರಾಜ್ಯದ ಹೊರಗಡೆ ಅಧಿವಾಸಿಸುವ ವ್ಯಕ್ತಿಗಳ ಒಡೆತನದಲ್ಲಿರುವ ವ್ಯವಹಾರಕ್ಕೆ ಸಂಬಂಧಿಸಿದಂತೆ ತೆರಿಗೆ ನಿರ್ಧರಣೆ ;

(ಘ) ಕರ ನಿರ್ಧರಣೆಯಿಂದ ತಪ್ಪಿಸಿಕೊಂಡಂಥ ಯಾವುವೇ ಅನುಸೂಚಿತ ಸರಕುಗಳ ಬಗ್ಗೆ ಈ ಅಧಿನಿಯಮದ ಮೇರೆಗೆ ತೆರಿಗೆ ನಿರ್ಧರಣೆ ;

(ಙ) 4ನೇ ಪ್ರಕರಣದ ಮೇರೆಗೆ ವ್ಯಾಪಾರಿಗಳ ನೋಂದಣಿಗಾಗಿನ ಕಾರ್ಯ ಪ್ರಕ್ರಿಯೆ ;

(ಚ) ಸ್ಥಳೀಯ ಪ್ರದೇಶದೊಳಗೆ ಅನುಸೂಚಿತ ಸರಕುಗಳನ್ನು ಬಳಸದಿದ್ದಲ್ಲಿ, ಮಾರಾಟ ಮಾಡದಿದ್ದಲ್ಲಿ, ಅಥವಾ ಉಪಯೋಗಿಸದಿದ್ದಲ್ಲಿ ಸಂಗ್ರಹಿಸಿದ ತೆರಿಗೆಯ ಮರುಪಾವತಿ ;

(ಛ) ವಿವರಣೆ ಪಟ್ಟಿಕೆಗಳನ್ನು ಒಪ್ಪಿಸಲು ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸಲು ಒತ್ತಾಯಿಸುವುದು ಮತ್ತು ವ್ಯಕ್ತಿಗಳು ಹಾಜರಾತಿಯನ್ನು ಒತ್ತಾಯಿಸುವುದು ಮತ್ತು ಪ್ರಮಾಣ ಅಥವಾ ಧೃಢೀಕರಣದ ಮೇಲೆ ಅವರನ್ನು ಪರೀಕ್ಷಿಸುವುದು ;

(ಜ) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ನೇಮಕಗೊಂಡ ಅಧಿಕಾರಿಗಳ ಕರ್ತವ್ಯ ಮತ್ತು ಅಧಿಕಾರಗಳು ;

(ಝ) ಈ ಅಧಿನಿಯಮದ ಮೇರೆಗಿನ ವ್ಯವಹರಣೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆಯ ಸಾಮಾನ್ಯ ನಿಯಂತ್ರಣ ಮತ್ತು ಅವುಗಳಲ್ಲಿ ಅಳವಡಿಸಬೇಕಾದ ನಮೂನೆಗಳು ;

(ಞ) ಈ ಅಧಿನಿಯಮದಲ್ಲಿ ಫೀಜುಗಳನ್ನು ವಿಧಿಸುವುದಕ್ಕೆ ಯಾವುದೇ ಉಪಬಂಧವಿಲ್ಲದಿರುವ ಅಥವಾ ಸಾಕಷ್ಟು ಉಪಬಂಧವಿಲ್ಲದಿರುವ ವಿಷಯವನ್ನೊಳಗೊಂಡು ಮತ್ತು ಈ ಅಧಿನಿಯಮವನ್ನು ಆಚರಣೆಗೆ ತರಲು ಉಪಬಂಧವು ಅವಶ್ಯವೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಡುವ ಯಾವುದೇ ಇತರ ವಿಷಯ ;

– ಇವುಗಳ ಬಗ್ಗೆ ಉಪಬಂಧಿಸಬಹುದು.

(3) (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಮೇರೆಗೆ ನಿಯಮವನ್ನು ರಚಿಸುವಲ್ಲಿ ಸರ್ಕಾರವು ಅದರ ಉಲ್ಲಂಘನೆಯಿಂದಾಗಿ ತಪ್ಪಿತಸ್ಥನಾದ ವ್ಯಕ್ತಿಯು ಅಪರಾಧವು ನಿರ್ಣಯವಾದ ಮೇಲೆ ಒಂದು ಸಾವಿರ ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಉಲ್ಲಂಘನೆಯು ಮುಂದುವರಿಯುವುದಾಗಿದ್ದಲ್ಲಿ ಮೊದಲು ದಿನದ ತರುವಾಯದ ಉಲ್ಲಂಘನೆಯು ಮುಂದುವರಿಯುವಾಗ ಪ್ರತಿದಿನಕ್ಕೆ ಐವತ್ತು ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(4) ಈ ಅಧಿನಿಯಮದ ಮೇರೆಗೆ ಯಾವುದೇ ನಿಯಮವನ್ನು ಪೂರ್ವಾನ್ವಯ ಪರಿಣಾಮ ಹೊಂದಿರುವಂತೆ ರಚಿಸಬಹುದು ಮತ್ತು ಅಂಥ ಯಾವುದೇ ನಿಯಮವನ್ನು ರಚಿಸಿದಾಗ ಅಂಥ ನಿಯಮವನ್ನು ರಚಿಸುವುದಕ್ಕಾಗಿನ ಕಾರಣಗಳನ್ನು ನಿರ್ದಿಷ್ಟಪಡಿಸುವ ವಿವರಣೆ ಪತ್ರವನ್ನು ಆ ನಿಯಮದೊಡನೆ (5)ನೇ ಉಪಪ್ರಕರಣದ ಮೇರೆಗೆ ರಾಜ್ಯವಿಧಾನ ಮಂಡಲದ ಎರಡೂ ಸದನಗಳ ಮುಂದೆ ಇಡತಕ್ಕದ್ದು. ಈ ಅಧಿನಿಯಮದ ಮೇರೆಗೆ ರಚಿಸಿದ ಎಲ್ಲ ನಿಯಮಗಳು (5)ನೆಯ ಉಪಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಮಾರ್ಪಾಟಿಗೊಳಪಟ್ಟು ಈ ಅಧಿನಿಯಮದಲ್ಲಿ ಅಧಿನಿಯಮಿಸಲಾಗಿದ್ದರೆ ಹೇಗೋ ಹಾಗೇ ಪರಿಣಾಮವನ್ನು ಹೊಂದಿರತಕ್ಕದ್ದು.

(5) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು

ಅಧಿವೇಶನದಲ್ಲಿರುವಾಗ ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನದಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಅದನ್ನು ಇಡಲಾದ ಅಧಿವೇಶನವು ಅಥವಾ ಅದಕ್ಕೆ ನಿಕಟೋತ್ತರ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳ ಒಪ್ಪಿದರೆ, ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಡಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ. ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾಗಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆಯನ್ನುಂಟುಮಾಡತಕ್ಕದ್ದಲ್ಲ.

**31. ತೊಂದರೆಗಳನ್ನು ನಿವಾರಿಸಲು ಅಧಿಕಾರ:–** ಈ ಅಧಿನಿಯಮದ ಉಪಬಂಧಗಳನ್ನು ತರುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ತೊಂದರೆಯನ್ನು ನಿವಾರಿಸುವುದಕ್ಕಾಗಿ ತನಗೆ ಅವಶ್ಯ ಅಥವಾ ವಿಹಿತವೆಂದು ಕಂಡು ಬರುವಂಥ ಉಪಬಂಧಗಳನ್ನು ರಚಿಸಬಹುದು.

**ಅನುಸೂಚಿ**

(1) ರೇಯಾನ್ ಅಥವಾ ನೈಲಾನ್ ಮತ್ತು ಇತರ ಮಾನವ ನಿರ್ಮಿತ ಅಥವಾ ಸಿಂಥೆಟಿಕ್ ಬಟ್ಟೆಗಳನ್ನೊಳಗೊಂಡು, ಗಿರಣಿಗಳಲ್ಲಿ ಅಥವಾ ವಿದ್ಯುತ್ ಮಗ್ಗಗಳಲ್ಲಿ ತಯಾರಿಸಿದ ಎಲ್ಲ ಬಗೆಯ ಬಟ್ಟೆಗಳು ಎಂದರೆ ಹತ್ತಿ, ಉಣ್ಣೆ ಅಥವಾ ಕೃತಕ ರೇಷ್ಮೆ ಮತ್ತು ಥಾನುಗಳಲ್ಲಿನ ಉಡುಪು ಬಟ್ಟೆ ;

(2) ಬೀಡಿಗಳು, ಸಿಗರೇಟುಗಳು, ಸಿಗಾರ್‌ಗಳು, ಚುಟ್ಟಾಗಳು, ನಶ್ಯ, ಜರ್ದಾ, ಕ್ವಿಮಾವ್ ಇತ್ಯಾದಿಗಳಂಥ ಹೊಗೆಸೊಪ್ಪಿನ ಎಲ್ಲ ಉತ್ಪಾದನೆಗಳು ;

(3) ಕಲ್ಲು ಸಕ್ಕರೆಯನ್ನು ಹೊರತುಪಡಿಸಿ ಸಕ್ಕರೆ ಮಿಠಾಯಿ ಮತ್ತು ಅಂಥವೇ ;

[*4 X XXX ]

(5) ಸಿಮೆಂಟ್

(6) ಕಾರ್ಬನ್ ಕಾಗದ, ಒತ್ತುವ ಕಾಗದ, ನೀರು ಸೇರದ ಕಾಗದ, ಪಿವಿಸಿ ಲೇಪಿತ ಕಾಗದ, ಫೆರ್ರೋಕಾಗದ, ಅಮೋನಿಯಾ ಕಾಗದ, ಸ್ಟೆನ್ಸಿಲ್ ಕಾಗದ, ತಿರುಳಿನರಟ್ಟುಗಳು, ಕಲಾ ರಟ್ಟುಗಳು, ದ್ವಿರಟ್ಟುಗಳು, ತ್ರಿರಟ್ಟುಗಳು ಕಾರ್ಡ್‌ಬೋರ್ಡ್‌ಗಳು, ನೆರಿಗೆ ರಟ್ಟುಗಳು ಮತ್ತು ಅಂಥವುಗಳನ್ನೊಳಗೊಂಡು ಎಲ್ಲ ಬಗೆಯ ಕಾಗದ ಆದರೆ ಮುದ್ರಣ ಕಾಗದವನ್ನು ಒಳಗೊಳ್ಳುವುದಿಲ್ಲ.

(7) ಔದ್ಯಮಿಕ ಯಂತ್ರ ಸಾಮಗ್ರಿಗಳು ಮತ್ತು ಅವುಗಳ ಭಾಗಗಳು ಮತ್ತು ಸಾಮಗ್ರಿಗಳು ;

(8) ಅಲ್ಯುಮಿನಿಯಂ ಗಟ್ಟಿಗಳು ;

(9) ಎಲ್.ಪಿ.ಜಿ. ಯನ್ನು ಹೊರತುಪಡಿಸಿ ಇತರ ಔದ್ಯಮಿಕ ಅಗಲಗಳು ;

(10) X X X X ]

(11) ಎಲ್ಲ ಪೆಟ್ರೋಲಿಯಂ ಉತ್ಪಾದನೆಗಳು, ಎಂದರೆ ಪೆಟ್ರೋಲ್, ಡೀಸೆಲ್, ಕಚ್ಚಾ ತೈಲ, ಮೃದುಚಾಲಕ ತೈಲ, ಟ್ರಾನ್ಸ್‌ಫಾರ್ಮರ್ ತೈಲ, ಬ್ರೇಕು ಅಥವಾ ಕ್ಲಚ್ಚು ದ್ರವ, ಬಿಟ್ಯಾಮನ್ (ಅಸ್ಫಾಟ್), ಡಾಂಬರು ಮತ್ತು ಇತರ ವಸ್ತುಗಳು, ಆದರೆ ಎಲ್.ಪಿ.ಜಿ. ಸೀಮೆಎಣ್ಣೆ ಮತ್ತು ರಸಗೊಬ್ಬರಗಳ ತಯಾರಿಕೆಯಲ್ಲಿ ಉಪಯೋಗಿಸುವುದಕ್ಕಾಗಿನ ನಾಫ್ತಾವನ್ನು ಒಳಗೊಳ್ಳುವುದಿಲ್ಲ.

(12) ಶೀತಕಗಳು, ಹವಾ ನಿಯಂತ್ರಗಳು ಮತ್ತು ಅವುಗಳ ಭಾಗಗಳು ಮತ್ತು ಉಪಸಾಮಗ್ರಿಗಳು ;

(13) ವಿದ್ಯುತ್ ಸರಕುಗಳು, ಎಂದರೆ ಅವುಗಳ ಭಾಗಗಳು ಮತ್ತು ಉಪ ಸಾಮಗ್ರಿಗಳನ್ನೊಳಗೊಂಡು ವಿದ್ಯುಚ್ಛಕ್ತಿಯಿಂದ ನಡೆಸುವ ಮೋಟಾರುಗಳು, ಪಂಕಗಳು, ಗೇಜಿರುಗಳು, ಹಾಟ್‌ಪ್ಲೇಟ್‌ಗಳು, ಒಲೆಗಳು, ಹೀಟರುಗಳು, ಮಿಕ್ಸರುಗಳು ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ ಇತರ ಬಾಬುಗಳು;

(14) ಎಲ್ಲ ಬಗೆಯ ಮೋಟಾರು ವಾಹನಗಳು, ಇದರಲ್ಲಿ ಪ್ರಯಾಣಿಕರ ಬಸ್ಸುಗಳು, ಟ್ರಾಕ್ಟರುಗಳು, ಟ್ರಾಕ್ಟರುಗಳ ಟ್ರೈಲರುಗಳು, ಪವರ್ ಟಿಲ್ಲರುಗಳು ಒಳಗೊಳ್ಳುವುದಿಲ್ಲ.

(15) ಎಲ್ಲ ಬಗೆಯ ಅದಿರುಗಳು ;

(16) ಸೆಣಬು ;

(17) ಎಲ್ಲ ಔದ್ಯಮಿಕ ಪ್ಯಾಕೇಜ್ ಮಾಡುವ ಸಾಮಗ್ರಿಗಳು ಮತ್ತು ;

(18) ಮಧ್ಯವರ್ತಿ ಅಥವಾ ಸಿದ್ದಗೊಳಿಸಿದ ಉತ್ಪಾದನೆಯಲ್ಲಿ ಒಳಹೋಗುವ ಅಥವಾ ಅದರ ತಯಾರಿಕೆಯಲ್ಲಿ ಉಪಯೋಗಿಸಬಹುದಾದ ಔದ್ಯಮಿಕ ಘಟಕ ಅಥವಾ ಇತರೆ ಯಾವುದೇ ವ್ಯಾಪಾರಿಯು

ಸ್ಥಳೀಯ ಪ್ರದೇಶದೊಳಕ್ಕೆ ತಂದ ಎಲ್ಲಾ ಕಚ್ಚಾ ಸಾಮಗ್ರಿಗಳು, ಘಟಕ ಭಾಗಗಳು ಮತ್ತು ಇತರ ಯಾವುದೇ ಬಳಸಿದ ವಸ್ತುಗಳು, ಉದಾಹರಣೆ.– ದ್ರಾವಕವನ್ನು ಹೊರತೆಗೆಯುವ ಕಾರ್ಯ ವಿಧಾನದಲ್ಲಿ ಉಪಯೋಗಿಸಿದ ಸಂಸ್ಕರಣ ಅಥವಾ ಇತರ ಯಾವುದೇ ರಾಸಾಯನಿಕ ದ್ರಾವಕಗಳು ;

**ವಿವರಣೆಗಳು:–** 1. **"ಔದ್ಯಮಿಕ ಘಟಕ"** ಎಂಬ ಪದಕ್ಕೆ 1948ರ ಕಾರ್ಖಾನೆಗಳ ಅಧಿನಿಯಮದ (1948ರ ಕೇಂದ್ರಾಧಿನಿಯಮ LXIII) ಮೇರೆಗೆ **'ಕಾರ್ಖಾನೆ'** ಎಂಬ ಪರಿಭಾಷೆಯೊಳಗೆ ಬರುವ ಒಂದು ತಯಾರಕ ಘಟಕ ಎಂದು ಅರ್ಥ, ಆದರೆ ಇದು,

(i) ಕರಕುಶಲ ವಸ್ತುಗಳನ್ನು ತಯಾರಿಸುವ ಘಟಕಗಳು (ii) ಕೈಮಗ್ಗ ನೇಯ್ಗೆ ಘಟಕಗಳು ಮತ್ತು (iii) ಯಾವ ಉದ್ಯಮಗಳ ಸಮೂಹ ಅಥವಾ ಸ್ವರ್ಗದ ಸ್ವರೂಪ, ಸ್ಪರ್ಧಿಸುವಿಕೆ, ಉದ್ಯೋಗ ಸಾಮರ್ಥ್ಯ ಅಥವಾ ಇತರ ಅಂಥ ಅಂಶಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಅಧಿಸೂಚಿಸಬಹುದೋ ಆ ಯಾವುದೇ ಉದ್ಯಮಗಳ ಯಾವುದೇ ಇತರ ಸಮೂಹ ಅಥವಾ ವರ್ಗ ಇವುಗಳನ್ನು ಒಳಗೊಳ್ಳುವುದಿಲ್ಲ.

(ii) ಕಚ್ಚಾ ಸಾಮಗ್ರಿಗಳು, ಘಟಕ ಭಾಗಗಳು ಮತ್ತು ಯಾವುದೇ ಇತರ ಬಳಸಿದ ವಸ್ತುಗಳು, ಇವು ಕಬ್ಬು, ಧಾನ್ಯಗಳು, ಎಣ್ಣೆ ಬೀಜಗಳು, ದ್ವಿದಳ ಧಾನ್ಯಗಳು, ಜಾಬೀನಿ ಅಥವಾ ಯಾವುದೇ ಜಾತಿಯ ಮರ, ಕಚ್ಚಾ ರೇಷ್ಮೆ ಗುಡುಗಳು, ಹೊಸೆದ ಅಥವಾ ಹುರಿಮಾಡಿದ ರೇಷ್ಮೆ ಅಥವಾ ರಾಜ್ಯ ಸರ್ಕಾರವು ಕಾಲಕಾಲಕ್ಕೆ 18ನೇ ನಮೂದನೆಯ ಮೇರೆಗೆ ತೆರಿಗೆಯಿಂದ ವಿನಾಯಿತಿಗೊಳಿಸುವ ಉದ್ದೇಶಗಳಿಗಾಗಿ ಅಧಿಸೂಚಿಸಬಹುದಾದಂಥ ಇತರ ಬಳಸಿದ ವಸ್ತುಗಳನ್ನು ಒಳಗೊಳ್ಳುವುದಿಲ್ಲ. ಆದರೆ ಅಲ್ಯುಮಿನಿಯಂ ಗಟ್ಟಿಗಳು ಮತ್ತು ಎಲ್ಲ ಬಗೆಯ ಅದಿರುಗಳನ್ನು ಒಳಗೊಳ್ಳುತ್ತದೆ.

**ಪಿ. ವೆಂಕಟಸುಬ್ಬಯ್ಯ**
ಕರ್ನಾಟಕ ರಾಜ್ಯಪಾಲರು

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ ಮತ್ತು ಅವರ
ಹೆಸರಿನಲ್ಲಿ,

**ಅರ್ಜುನಪ್ಪ**
ಸರ್ಕಾರದ ಅಧೀನ ಕಾರ್ಯದರ್ಶಿ
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ
(ಪ್ರಕಟಣೆಗಳು).

---

1. 1984ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 15ರ ಮೂಲಕ ಬಿಟ್ಟುಬಿಡಲಾಗಿದೆ.
*. 1984ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 15ರ ಮೂಲಕ ಬಿಟ್ಟುಬಿಡಲಾಗಿದೆ.